ಬೆಲೆ ರೂ.2.50
D.O.P - 15th of every month at Udupi Sorting Office


ತಂತ್ರಾಡಿ ವಿಶ್ವನಾಥ ಶಾನುಭೋಗ್
☎ 94487 24161
97417 85551
ಹರಿಕೃಷ್ಣ ಡಿಜಿಟಲ್ಸ್
ಶುಭ ಸಮಾರಂಭಗಳ ಛಾಯಾಚಿತ್ರಣ ಹಾಗೂ ವೀಡಿಯೊ ಚಿತ್ರಣಕ್ಕಾಗಿ ಸಂಪರ್ಕಿಸಿ
"ಶ್ರೀರಂಗ", ವಿ. ಪಿ. ನಗರ, 3ನೇ ಮುಖ್ಯ ರಸ್ತೆ, ಕುಂಜಿಬೆಟ್ಟು, ಉಡುಪಿ - 576102
ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು

# ಶ್ರೀ ಶಾರದಾ

ಮಾಸಪತ್ರಿಕೆ – 15 ಡಿಸೆಂಬರ್ 2017

॥ ಧಿಯೋ ಯೋನಃ ಪ್ರಚೋದಯಾತ್ ॥

Regn.No.KAR/KAN/2000/2758 ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ – 576 102. ☎ 2520754

ಸಂಪುಟ-17 ಸಂಚಿಕೆ-12 ಪುಟಗಳು-8 Registered Under No.UDP/1260/2015-2017 Licenced to Post without Prepayment WPP No. SK/WPP/UDP/81/15-17

## ಉಡುಪಿ ಸಂಘದ ವಾರ್ಷಿಕ ಮಹಾಸಭೆ





ತಾ.10–12–2017ರ ರವಿವಾರದಂದು ಉಡುಪಿಯ ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.)ದ ಮಹಾಸಭೆಯು ಕುಂಜಿಬೆಟ್ಟಿನ ಶಾರದಾ ಮಂಟಪದ ಜ್ಞಾನಮಂದಿರದಲ್ಲಿ ಸಂಜೆ 4 ಗಂಟೆಗೆ ನೆರವೇರಿತು. ಶ್ರೀಮತಿ ಜಯಲಕ್ಷ್ಮೀಯವರ ಪ್ರಾರ್ಥನೆಯೊಂದಿಗೆ ಸಭೆಯು ಆರಂಭ ವಾಯಿತು. ಗತ ವರ್ಷದಲ್ಲಿ ಅಗಲಿದ ಆಡಳಿತ ಮಂಡಳಿಯ ಮಾಜಿ ಸದಸ್ಯ ದಿ। ಸಿ.ದೇವರಾವ್ ಮತ್ತು ಗತಿಸಿದ ಇತರ ಸಮಾಜಬಾಂಧವರ ಆತ್ಮಕ್ಕೆ ಶಾಂತಿ ಕೋರಲಾಯಿತು. ಸಂಘದ ಅಧ್ಯಕ್ಷರಾದ ಶ್ರೀ ವೈ. ಭುವನೇಂದ್ರರಾವ್‌ರವರು ಪ್ರಾಸ್ತಾವಿಕವಾಗಿ ಮಾತನಾಡಿ ವರದಿ ವರ್ಷದಲ್ಲಿ ಸಂಘವು ಕೈಗೊಂಡ ಕಾರ್ಯಕ್ರಮಗಳನ್ನು ವಿವರಿಸಿ ಎಲ್ಲರನ್ನು ಸ್ವಾಗತಿಸಿದರು. ಕಾರ್ಯದರ್ಶಿಗಳಾದ ಶ್ರೀ ಕೊಕ್ರಾಡಿ ಸುರೇಶ ರಾಯರು 2016–17ನೇ ಸಾಲಿನ ವಾರ್ಷಿಕ ಮಹಾಸಭೆಯ ನೋಟೀಸು ಹಾಗೂ ವರದಿಯನ್ನು ಮಂಡಿಸಿ ಅನುಮೋದನೆ ಪಡೆದರು. ಹಾಗೆಯೇ 2015–16ನೇ ಸಾಲಿನ ವಾರ್ಷಿಕ ಮಹಾಸಭೆಯ ವರದಿಯನ್ನು ಮಂಡಿಸಿ ಅಂಗೀಕಾರ ಪಡೆದರು.

ಕೋಶಾಧಿಕಾರಿಯಾದ ಶ್ರೀ ಕೆ. ಸುಧಾಕರ ರಾಯರು 2016–2017ರ ಲೆಕ್ಕಪತ್ರ ಹಾಗೂ 2017–2018ರ ಅಂದಾಜು ವೆಚ್ಚಗಳನ್ನು ಮಂಡಿಸಿ ಅನುಮೋದನೆಯನ್ನು ಪಡೆದರು. ನಂತರ 2017–18ನೇ ವರ್ಷಕ್ಕೆ ಲೆಕ್ಕಪರಿಶೋಧಕರಾಗಿ ಹೆಬ್ಬಾರ್ ಆ್ಯಂಡ್ ಅಸೋಸಿಯೇಟ್ಸ್‌ನ ಶ್ರೀ ಗಣೇಶ್ ಹೆಬ್ಬಾರ್‌ರನ್ನು ನೇಮಿಸಲಾಯಿತು. ಸಂಘದ ಸದಸ್ಯರ ಪ್ರಶ್ನೆಗಳಿಗೆ ಸಮಾಧಾನಕರ ಉತ್ತರಗಳನ್ನು ನೀಡಲಾಯಿತು. ಶ್ರೀ ಐ.ಕೆ. ಜಯಚಂದ್ರ ರಾಯರ ಧನ್ಯವಾದದೊಂದಿಗೆ ಸಭೆಯು ಮುಕ್ತಾಯವಾಯಿತು.

**ಓದುಗರಿಗೆ ಹೊಸವರ್ಷದ ಶುಭಾಶಯಗಳು**

## ಯುವ ವೇದಿಕೆ, ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.)

ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ

### ಶ್ರೀ ಶಾರದಾ ಟ್ರೋಫಿ ಕ್ರಿಕೆಟ್ ಪಂದ್ಯಾಟ-2018

**21-01-2018ನೇ ಆದಿತ್ಯವಾರದಂದು ನಡೆಯಲಿದೆ.**

ಆಸಕ್ತ ತಂಡಗಳು ಶ್ರೀ ಅಜಿತ್ (Ph : 0820-2520754), ವಸಂತ ರಾವ್ ಕರಂಬಳ್ಳಿ (M : 9632291183), ಉಂಡಾರು ಕೃಷ್ಣರಾಜ ರಾವ್ (M : 9164581333), ಕೆ. ಸುರೇಶ್ ರಾವ್, ಕುತ್ಪಾಡಿ (M : 9036443884) ಇವರಲ್ಲಿ ತಮ್ಮ ತಂಡದ ಹೆಸರನ್ನು ನೋಂದಾಯಿಸಿಕೊಳ್ಳಬೇಕಾಗಿ ವಿನಂತಿ.

ವಿಶೇಷ ಸೂಚನೆ :

1) ಪಂದ್ಯಾವಳಿಯು ಓವರ್ ಆರ್ಮ್, ಟೆನ್ನಿಸ್‌ಬಾಲ್, ನಿಗದಿತ ಓವರ್‌ಗಳಂತೆ ನಡೆಯುತ್ತದೆ.
2) ಪಂದ್ಯಾವಳಿಯು ನಮ್ಮ ಸಮಾಜ ಬಾಂಧವರಿಗೆ ಮಾತ್ರ ಸೀಮಿತವಾಗಿದೆ.
3) ತಂಡಗಳು ಪಂದ್ಯಾಟದ ದಿನ ಬೆಳಿಗ್ಗೆ 8-30ಕ್ಕೆ ಕ್ರೀಡಾಂಗಣದಲ್ಲಿ ಹಾಜರಿದ್ದು ಸಹಕರಿಸಬೇಕು.

**ಇದೇ ದಿನ 10ನೇ ತರಗತಿಯವರೆಗಿನ ಮಕ್ಕಳಿಗೆ ಹಾಗೂ ಹಿರಿಯ ನಾಗರಿಕರಿಗೂ ಕ್ರಿಕೆಟ್ ಪಂದ್ಯಾಟ** ನಡೆಯಲಿದೆ. ಆಸಕ್ತ ತಂಡಗಳು ಬೆಳಿಗ್ಗೆ 9-30ಕ್ಕೆ ಹಾಜರಿರಬೇಕಾಗಿ ಅಪೇಕ್ಷೆ. ಕ್ರಿಕೆಟ್ ಪಂದ್ಯಾಟಕ್ಕೆ ಪ್ರಾಯೋಜಕರಾಗಿ, ದಾನಿಗಳಾಗಿ ಹಾಗೂ ಬ್ಯಾನರ್ ಪ್ರದರ್ಶಿಸ ಬಯಸುವವರು ಶಾರದಾ ಮಂಟಪದ ಮ್ಯಾನೇಜರ್‌ರವರನ್ನು ಮುಂಚಿತವಾಗಿ ಸಂಪರ್ಕಿಸಬಹುದು.

ಪ್ರಥಮ ಬಹುಮಾನ - ರೂ.10,000/- ಹಾಗೂ ಟ್ರೋಫಿಯನ್ನು ಅಲೆವೂರು ಶಾಮರಾಯರು ತಮ್ಮ ಮಾತಾಪಿತರ ಸ್ಮರಣಾರ್ಥ ಪ್ರಾಯೋಜಿಸಿರುತ್ತಾರೆ.

ಉತ್ತಮ ದಾಂಡಿಗ, ಉತ್ತಮ ಬೌಲರ್ ಮತ್ತು ಶ್ರೇಷ್ಠ ಆಲ್‌ರೌಂಡರ್ ಪುರಸ್ಕಾರಗಳನ್ನು ಶ್ರೀ ಬಿ. ಜಯರಾಮ ರಾಯರು ಪ್ರಾಯೋಜಿಸಿರುತ್ತಾರೆ.


- ಅಧ್ಯಕ್ಷರು ಮತ್ತು ಸಂಚಾಲಕರು, ಯುವ ಮತ್ತು ಕ್ರೀಡಾ ವೇದಿಕೆ

ತಾ.21-01-2018ನೇ ಆದಿತ್ಯವಾರ ಬೆಳಿಗ್ಗೆ ಗಂಟೆ 9-00ರಿಂದ
ಮಹಿಳೆಯರು ಮತ್ತು ಮಕ್ಕಳಿಗಾಗಿ ಶ್ರೀ ಶಾರದಾ ಮಂಟಪದಲ್ಲಿ
**ರಾಜ್ಯಮಟ್ಟದ ಶಟಲ್ ಬ್ಯಾಡ್ಮಿಂಟನ್**
**ಹಾಗೂ ವಿವಿಧ ಒಳಾಂಗಣ ಕ್ರೀಡಾ ಸ್ಪರ್ಧೆ**ಗಳನ್ನು
ಏರ್ಪಡಿಸಲಾಗಿದೆ.

- ಅಧ್ಯಕ್ಷರು ಮತ್ತು ಸಂಚಾಲಕರು, ಮಹಿಳಾ ವೇದಿಕೆ

ವಿ.ಸೂ. : ಬ್ಯಾಡ್ಮಿಂಟನ್ ಸ್ಪರ್ಧೆಯಲ್ಲಿ ಭಾಗವಹಿಸುವವರು ತಾ.15-01-2018ರ ಒಳಗೆ ಮುಂಗಡವಾಗಿ ಹೆಸರನ್ನು ನೋಂದಾಯಿಸಬೇಕು. ನೋಂದಾಯಿಸಲು ಸಂಪರ್ಕಿಸಿ : ಶ್ರೀ ಅಜಿತ್ (Ph: 0820-2520754), ಶ್ರೀಮತಿ ಉಷಾ ಕೆ. ಎಲ್. ಶ್ಯಾನುಭಾಗ್ (M : 9449200718) ಶ್ರೀಮತಿ ಜಯಲಕ್ಷ್ಮೀ ಎಮ್. ರಾವ್ (M : 9620863382), ಡಾ। ವೈ. ಸುದರ್ಶನ ರಾವ್ (M : 9845136322), ಶ್ರೀ ಐ.ಕೆ. ಜಯಚಂದ್ರ (M : 9448331683)

## ಶೃಂಗೇರಿ ಜಗದ್ಗುರುಗಳ ಭೇಟಿ





ಶ್ರೀ ಶಾರದಾ ಮಂಟಪದಲ್ಲಿರುವ ಶ್ರೀ ಶಾರದಾ ದೇವಸ್ಥಾನದಲ್ಲಿ ಶ್ರೀ ಶಾರದಾ ಪರಮೇಶ್ವರಿ, ಶ್ರೀ ಗಣಪತಿ ಹಾಗೂ ಶ್ರೀಆದಿಶಂಕರರ ವಿಗ್ರಹಗಳನ್ನು ಮರು ಪ್ರತಿಷ್ಠಾಪಿಸಿ ಬ್ರಹ್ಮಕಲಶೋತ್ಸವವನ್ನು ನೆರವೇರಿಸಿ 12 ವರ್ಷಗಳು ಕಳೆದಿರುವ ಪ್ರಯುಕ್ತ ಕುಂಭಾಭಿಷೇಕವನ್ನು ಶ್ರೀ ಶ್ರೀಗಳ ಅಮೃತಹಸ್ತದಿಂದ ನೆರವೇರಿಸಲು ಶ್ರೀದೇವಳದ ಭಕ್ತಾಭಿಮಾನಿಗಳು ಹಾಗೂ ಆಡಳಿತ ಮಂಡಳಿಯವರು ಸಂಕಲ್ಪಿಸಿದ್ದು ಆ ಪ್ರಯುಕ್ತ ಶ್ರೀ ಶ್ರೀಗಳವರನ್ನು ಭಿನ್ನವಿಸಲು ತಾ.17–11–2017ರಂದು ಸಂಘದ ಅಧ್ಯಕ್ಷರಾದ ಶ್ರೀ ವೈ.ಭುವನೇಂದ್ರರಾಯರ ನೇತೃತ್ವದಲ್ಲಿ ಸಮಾಜಬಾಂಧವರು ತೆರಳಿ ಕ್ಷೇತ್ರದ ತಂತ್ರಿಗಳಾದ ಬ್ರಹ್ಮಶ್ರೀ ವಾಗೀಶ ಶಾಸ್ತ್ರಿಗಳವರ ಮುಖಾಂತರ ಅರಿಕೆ ಮಾಡಿಕೊಂಡಾಗ, ಸನ್ನಿಧಾನಂಗಳವರು ಹರ್ಷಚಿತ್ತದಿಂದ ಮುಂದಿನ ನವರಾತ್ರಿ ಕಳೆದು ಶುಭದಿನವನ್ನು ನಿಗದಿ ಮಾಡುವುದಾಗಿ ಹೇಳಿ ಫಲಮಂತ್ರಾಕ್ಷತೆಯನ್ನು ನೀಡಿ ಅನುಗ್ರಹಿಸಿದರು. ಕಿರಿಯ ಶ್ರೀಗಳ ಆಶೀರ್ವಾದವನ್ನೂ ಪಡೆದು ಶ್ರೀ ಶಾರದಾ ದೇವಾಲಯಕ್ಕೆ ಭೇಟಿಯಿತ್ತು ನಿಯೋಗವು ಉಡುಪಿಗೆ ವಾಪಾಸಾಯಿತು .

## ಪ್ರವಾಸ :

ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಕುಂಜಿಬೆಟ್ಟು , ಉಡುಪಿ ಇದರ ಯುವ ಮತ್ತು ಕ್ರೀಡಾ ವೇದಿಕೆಯ ವತಿಯಿಂದ ತಾ.24-12-2017ರ ರವಿವಾರದಂದು ಮಂಡಗದ್ದೆ-ಸಕ್ರೆಬೈಲು-ಲಯನ್‌ಪಾರ್ಕ್-ರಾಮೇಶ್ವರ ದೇವಸ್ಥಾನ-ಗಾಜನೂರು ಅಣೆಕಟ್ಟು-ಕುಪ್ಪಳ್ಳಿ ಇತ್ಯಾದಿ ಸ್ಥಳಗಳಿಗೆ ಪ್ರವಾಸವನ್ನು ಆಯೋಜಿಸಲಾಗಿದೆ. ಬೆಳಿಗ್ಗೆ 6-30 ಗಂಟೆಗೆ ಶ್ರೀಶಾರದಾ ಮಂಟಪದಿಂದ ಹೊರಟು ಸಾಯಂಕಾಲ ವಾಪಾಸು ಬರಲಾಗುವುದು. ಪ್ರವಾಸ ಶುಲ್ಕ ಅಂದಾಜು ತಲಾ ರೂ.700/-.

ತಮ್ಮ ಹೆಸರುಗಳನ್ನು ತಾ.20-12-2017ರ ಮೊದಲು ಶ್ರೀಶಾರದಾ ಮಂಟಪದ ಮೆನೇಜರ್ ಶ್ರೀ ಅಜಿತ್ (0820-2520754), ಯುವ ವೇದಿಕೆಯ ಅಧ್ಯಕ್ಷ ಶ್ರೀ ಕೃಷ್ಣರಾಜ ರಾವ್ ಉಂಡಾರು (9164581333) ಅಥವಾ ಸಂಚಾಲಕ ಶ್ರೀ ವಸಂತರಾವ್ ಕರಂಬಳ್ಳಿ (9632291183) ಇವರಲ್ಲಿ ನೋಂದಾಯಿಸಿಕೊಳ್ಳಬೇಕಾಗಿ ವಿನಂತಿ.

# ಸಂಪಾದಕೀಯ.....

ಪರಧರ್ಮೀಯರು ಭಾರತದೇಶವನ್ನು ಆಕ್ರಮಿಸಿದಾಗ ಅವರ ಧರ್ಮವನ್ನು ಬಲತ್ಕಾರವಾಗಿ ನಮ್ಮವರ ಮೇಲೆ ಹೇರಿದರು, ಸಾಮೂಹಿಕವಾಗಿ ಮತಾಂತರ ಮಾಡಿದರು, ನಮ್ಮ ದೇವಸ್ಥಾನಗಳನ್ನು ಅವರ ಪ್ರಾರ್ಥನಾ ಸ್ಥಳವಾಗಿ ಅನೇಕ ಕಡೆ ಬದಲಾಯಿಸಿದರು ಎಂದು ಇತಿಹಾಸದಲ್ಲಿ ಓದುತ್ತೇವೆ. ರಾಮಜನ್ಮಭೂಮಿಯಾದ ಅಯೋಧ್ಯೆಯಲ್ಲಿರುವ ಬಾಬರಿ ಮಸೀದಿಯುನ್ನು ರಾಮಮಂದಿರವನ್ನು ಕೆಡವಿ ಅದರ ಮೇಲೆ ಕಟ್ಟಿದ ಮಸೀದಿಯೆಂದು ಹೇಳುತ್ತಾರೆ. ಆದುದರಿಂದ ಮಸೀದಿಯ ಜಾಗದಲ್ಲಿ ಮಂದಿರವನ್ನು ಪುನಃ ಕಟ್ಟಬೇಕೆಂಬುದು ಹಿಂದೂಧರ್ಮೀಯರ ವಾದ. ನಾಗರೀಕ ಸಮಾಜದಲ್ಲಿ ಎಲ್ಲಾ ಮತ ಧರ್ಮಗಳನ್ನು ಗೌರವಿಸುತ್ತಾ ಇತಿಹಾಸದ ಪಳೆಯುಳಿಕೆಗಳನ್ನು ಇತಿಹಾಸದ ರೂಪದಲ್ಲೇ ಉಳಿಸಿಕೊಳ್ಳಬೇಕಲ್ಲದೇ, ಒಂದು ಧರ್ಮದವರು ಪ್ರಬಲರಾದಾಗ ಪೂಜನೀಯ ಸ್ಥಳಗಳನ್ನು ತಮ್ಮ ಧರ್ಮಾನುಸಾರ ಬದಲಾಯಿಸುವುದು ತಾವು ನಂಬಿರುವ ದೇವನಿಗೂ ಮಾಡುವ ಅಪಮಾನವಾಗಿದೆ.

ಶೈವ ಹಾಗೂ ವೈಷ್ಣವ ಮತಗಳು ಹಿಂದೂ ಧರ್ಮದ ಪ್ರಮುಖ ಕವಲುಗಳು. ಇವೆರಡಲ್ಲದೇ ಗಣಪತಿಯನ್ನು, ದುರ್ಗೆಯನ್ನು ಆರಾಧಿಸುವ ಪಂಗಡಗಳು ಇವೆ. ಆದರೆ ಯಾಕೋ ಏನೊ ಆನಾದಿ ಕಾಲದಿಂದಲೂ ಶೈವ ಹಾಗೂ ವೈಷ್ಣವರ ಮಧ್ಯೆ ತಾಕಲಾಟ ಇದ್ದೇ ಇದೇ. ಅದು ಎಷ್ಟರಮಟ್ಟಿಗೆ ಇತ್ತು ಅಂದರೆ ಈಗ ಹಿಂದೂ ಮುಸ್ಲಿಂ ಕೋಮು ಗಲಭೆ ಸಂಭವಿಸುವ ರೀತಿಯಲ್ಲಿ. ಆಗ ಶೈವ ವೈಷ್ಣವರ ಮಧ್ಯೆ ಗಲಭೆ ಸಂಭವಿಸುತ್ತಿತ್ತು. ಶ್ರೀ ಶಂಕರಾಚಾರ್ಯರು ಎಂಟನೆಯ ಶತಮಾನದಲ್ಲಿ ದೇವರ ಬೇರೆ ಬೇರೆ ಹೆಸರುಗಳಲ್ಲಿ ಮತಪಂಥಗಳನ್ನು ಕಟ್ಟಿಕೊಂಡು ಪರಸ್ಪರ ವಿರುದ್ಧ ದಿಕ್ಕಿನಲ್ಲಿ ಮುಖಹಾಕಿ ನಿಂತಿದ್ದ ಮತಗಳನ್ನು ಒಗ್ಗೂಡಿಸಿ ಪ್ರಬಲ ಹಿಂದೂ ಸಮಾಜಕ್ಕೆ ಅಸ್ಥಿಭಾರ ಹಾಕಿದರು. ಷಣ್ಮತ ಸ್ಥಾಪನಾಚಾರ್ಯ ಎನಿಸಿಕೊಂಡರು. ಶ್ರೀ ಶಂಕರರ ನಂತರ ಬಂದ ಆಚಾರ್ಯರುಗಳು ಬೇರೆ ಸಿದ್ಧಾಂತಗಳನ್ನು ಪ್ರತಿಪಾದಿಸಿದರೂ ಶ್ರೀ ಶಂಕರಾಚಾರ್ಯರ ಈ ಮಹಾತ್ಕಾರ್ಯದಿಂದ ಉಪಕೃತರೇ ಆಗಿದ್ದಾರೆ.

ಅದು ಎಂಟನೆಯ ಶತಮಾನದ ಕಥೆ. ಇದೀಗ ಇಪ್ಪತ್ತೊಂದನೆಯ ಶತಮಾನ. ನಾವೀಗ ಸುಸಂಸ್ಕೃತ ಸಮಾಜದಲ್ಲಿದ್ದೇವೆ. ಹಿಂದೂ ಧರ್ಮದಲ್ಲಿರುವ ನ್ಯೂನತೆಗಳನ್ನು ಸರಿಪಡಿಸಲು ಸಂಕಲ್ಪಿಸಿದ್ದೇವೆ. ಹಿಂದೂ ಧರ್ಮದ ಉಳಿವಿಗೆ ಒಗ್ಗಟ್ಟು ಎಷ್ಟು ಅಗತ್ಯ ಎಂಬುದನ್ನು ಕಳೆದ ಹನ್ನೆರಡು ಶತಮಾನಗಳ ಇತಿಹಾಸದಿಂದ ಅರಿತಿದ್ದೇವೆ. ಹಿಂದಿನ ನಾಲ್ಕು ಶತಮಾನಗಳಲ್ಲಿ ಹಿನ್ನಡೆ ಕಂಡಿದ್ದ ಹಿಂದೂ ಧರ್ಮವು ಮರಳಿ ಚೇತರಿಸಿ ಭಾರತವನ್ನು ದಾಟಿ ಪ್ರಪಂಚದ ಎಲ್ಲ ದೇಶಗಳಲ್ಲಿ ಪಸರುತ್ತಾ ಇದೆ. ಪಾಶ್ಚಾತ್ಯರು ಕೂಡಾ ಹಿಂದೂ ಧರ್ಮದ ವಿಶೇಷತೆಯನ್ನು ಮನಗಂಡು ನಮ್ಮ ವೇದ ಉಪನಿಷತ್ತುಗಳನ್ನು ಕಲಿಯತೊಡಗಿದ್ದಾರೆ. ಅಂತಿರುವಾಗ ನಾವು ನಮ್ಮ ಇತಿಹಾಸದ ಪಳೆಯುಳಿಕೆಗಳನ್ನು ಮುಖ್ಯವಾಗಿ ನಮ್ಮ ದೇವಾಲಯಗಳನ್ನು ಕಾಪಾಡಬೇಕಿದೆ. ಈ ಮಹತ್ಕಾರ್ಯದಲ್ಲಿ ನಾವೆಲ್ಲರೂ ಶೈವ ವೈಷ್ಣವ ಶ್ರೇಷ್ಠವೆಂಬ ಸಂಕುಚಿತ ಮನೋಭಾವವನ್ನು ಬದಿಗಿಟ್ಟು ಮುಂದಡಿಯಿಡುವ ಅವಶ್ಯಕತೆ ಇದೆ.

ಇಷ್ಟೆಲ್ಲಾ ಕಥೆಯನ್ನು ಹೇಳಲು ಮೂಲಕಾರಣ ನಮ್ಮ ಉಡುಪಿಯ ಹೃದಯಭಾಗದಲ್ಲಿರುವ ದೇವಾಲಯಗಳ ಸಂಕೀರ್ಣದಲ್ಲಿರುವ ಶಿವ ದೇವಸ್ಥಾನ. ಈ ದೇವಸ್ಥಾನದಿಂದಲೆ ಉಡುಪಿಗೆ ರಜತಪುರ ಎಂದು ಹೆಸರು ಬಂದಿದೆ. ಒಂದು ಕಾಲದಲ್ಲಿ ಸ್ಥಾನಿಕರ ಆಡಳಿತದಲ್ಲಿಯೂ ಇದ್ದ ದೇವಸ್ಥಾನ. ಅನಾದಿ ಕಾಲದಿಂದಲೂ ಶಿವಾಲಯ. ಶೈವರಾಗಿದ್ದ ಆಳುಪರು ಎಂಟನೆಯ ಶತಮಾನದಲ್ಲಿ ಕಟ್ಟಿದ ದೇವಸ್ಥಾನವಿದು. ಮುಜರಾಯಿ ಇಲಾಖೆಯ ರೆಕಾರ್ಡ್‌ನಲ್ಲೂ ಶಿವಾಲಯವೆಂದೇ ಉಲ್ಲೇಖ. ಈ ದೇವಾಲಯದಲ್ಲಿ ಲಿಂಗಕ್ಕೇ ಪೂಜೆ. ಪ್ರತೀ ಸೋಮವಾರ ಈ ದೇವಸ್ಥಾನದಲ್ಲಿ “ದೀಪದ ಎಣ್ಣೆ” ಸೇವೆ ಸಲ್ಲಿಸುವ ಭಕ್ತರ ಸಂಖ್ಯೆ ಸಾವಿರಕ್ಕೂ ಅಧಿಕ. ನನಗೆ ಬಾಲ್ಯದಲ್ಲಿ ತೀರ್ಥ ಮಂಟಪದಲ್ಲಿ ನಂದಿಯ ವಿಗ್ರಹವಿದ್ದದ್ದೂ ನೆನಪಿದೆ. (ಈ ನಂದಿವಿಗ್ರಹವೆಲ್ಲಿ ಕಾಣೆಯಾಯಿತೋ ಶಿವನೇ ಬಲ್ಲ) ಇದೀಗ ಕೆಲವರಿಗೆ ಆ ಲಿಂಗದಲ್ಲಿ ನಾರಾಯಣ ಬಂದು ಸೇರಿಕೊಂಡಿದ್ದಾನೆ ಎಂದು ಅನಿಸುತ್ತಿದೆಯಂತೆ. ಅದು ಅವರ ಭ್ರಮೆಯೋ, ನಿಜವೊ, ದೇವರನ್ನೇ ಮತಾಂತರಗೊಳಿಸುವ ಮೂರ್ಖತನವೋ ತಿಳಿಯದು. ಒಟ್ಟು “ದೇವರೊಬ್ಬನೇ, ನಾಮ ಹಲವು” ಎಂಬ ರೀತಿಯಲ್ಲಿ “ಮೂರ್ತಿಯೊಂದು, ದೇವರು ಹಲವು” ಎನ್ನುವ ಹೊಸ ಸಾಮರಸ್ಯದ ವಾಕ್ಯವೊಂದು ಇದರೊಂದಿಗೆ ಹುಟ್ಟಿಕೊಂಡಿದೆ. ಈ ಸಾಮರಸ್ಯದ ಅಂಗವಾಗಿ ಇನ್ನೆಷ್ಟು ದೇವರುಗಳು ಈ ಲಿಂಗದಲ್ಲಿ ಸೇರಿಕೊಳ್ಳಲಿದ್ದಾರೋ ಕಾದು ನೋಡಬೇಕು. ಕಾರಣ ಏನಿದ್ದರೂ ಶ್ರೀಮನ್ನಾರಾಯಣನಿಗೆ ಉಡುಪಿಯಲ್ಲಿ ಸಾವಿರ ಸಾವಿರ ಸಂಖ್ಯೆಯಲ್ಲಿ ಭಕ್ತರಿದ್ದೂ ಹಳೆಯ ಈಶ್ವರನ ಗುಡಿಯಲ್ಲಿ ಬಲಾತ್ಕಾರವಾಗಿ ವಾಸಮಾಡಬೇಕಾದ ದುರ್ಗತಿಯೊದಗಿರುವುದು ನಮಗೆಲ್ಲರಿಗೂ ದು:ಖ ತಂದಿದೆ. ಹೆಚ್ಚೆನಂಶ ಅವನಿಗೊಂದು ಹೊಸ ದೇವಸ್ಥಾನವನ್ನು ಶಿವಭಕ್ತರೇ ಕಟ್ಟಿಕೊಡಬೇಕೇನೋ...

ಏನೇ ಇರಲಿ ಹರಿ ಹರರಿಬ್ಬರೂ ದೇವತಾಶಕ್ತಿಯೊಂದರ ಎರಡು ರೂಪಗಳಷ್ಟೇ. ಗರ್ಭಗುಡಿಯಲ್ಲಿರುವ ಕಲ್ಲಿನ ಲಿಂಗವನ್ನು ನಮ್ಮ ಸಕಲ ಕಷ್ಟಗಳನ್ನು ಪರಿಹರಿಸುವ ಇಂತಹಾ ಹೆಸರಿನ ದೇವರೆಂದು ನಂಬಿ ಪೂಜಿಸುವುದು ಭಕ್ತರ ಭಾವನೆಯಷ್ಟೇ ವಿನಹ ಗರ್ಭಗುಡಿಯಲ್ಲಿರುವ ದೇವರು ತನ್ನ ಹೆಸರೇನೆಂದು ಹೇಳಿಕೊಳ್ಳುವುದಿಲ್ಲವಲ್ಲಾ. ಹೀಗೆ ಗರ್ಭಗುಡಿಯಲ್ಲಿರುವ ಲಿಂಗವನ್ನು ಅನಂತೇಶ್ವರನೆಂದು ನಂಬಿ, ತಲತಲಾಂತರಗಳಿಂದ, ಪ್ರತಿನಿತ್ಯವೂ ಪೂಜಿಸುತ್ತಿದ್ದವರೇ ಇಂದು ದೇವರ ಹೆಸರನ್ನೇ ಬದಲಾಯಿಸಿರುವುದು ಪರಧರ್ಮೀಯನಾದ ಬಾಬರನು ರಾಮಮಂದಿರವನ್ನು ಕೆಡವಿ ಮಸೀದಿಯನ್ನು ಕಟ್ಟಿಸಿದ್ದಕ್ಕಿಂತಲೂ ಹೀನಾಯವಾದ ಕೃತ್ಯವೆಂದು ಆಸ್ತಿಕರಿಗೆ ಅನಿಸುತ್ತಿದೆ. ಬಾಬರನು ರಾಮನನ್ನು ನಂಬದವ, ಮೇಲಾಗಿ ಮೂರ್ತಿಪೂಜೆಯ ವಿರೋಧಿಯಾಗಿದ್ದವನು. ಆದುದರಿಂದ ಅವನು ಮಂದಿರವನ್ನು ಒಡೆದು ಮಸೀದಿಯೊಂದನ್ನು ಕಟ್ಟಿದುದು ಕನಿಷ್ಟ ಅವನ ನಂಬಿಕೆಗಳಿಗೆ ಉಚಿತವಾದ ಕೃತ್ಯವಾಗಿದ್ದರೂ ಆಗಿತ್ತೆನ್ನಬಹುದು. ಆದರೆ ಇಲ್ಲಿ ದೇವರನ್ನು ಪ್ರತಿನಿತ್ಯವೂ ಕೈಯಾರೆ ಪೂಜಿಸಿ, ಪ್ರಾರ್ಥಿಸಿ, ಭಕ್ತರಿಗೆ ತೀರ್ಥಪ್ರಸಾದ ಕೊಡುತ್ತಿದ್ದವರಿಂದಲೇ, ಶೈವ ದೇವಾಲಯವು ವೈಷ್ಣವ ದೇವಾಲಯವಾಗಿ ಬದಲಾಗುತ್ತಿರುವುದು ಆತ್ಮವಂಚನೆಯಲ್ಲದೇ ಬೇರೇನಲ್ಲ. ಈ ಕೆಲಸ ಸ್ವತಃ ಶ್ರೀ ಮಹಾವಿಷ್ಣುವಿಗೆ ಒಪ್ಪಿಗೆಯಾದೀತೆ ಎಂಬ ಪ್ರಶ್ನೆಯನ್ನು ಶ್ರೀ ಮಹಾವಿಷ್ಣುವನ್ನು ನಂಬುವವರಾದರೆ ಅವರು ಮನದಲ್ಲಿ ಹಾಕಿಕೊಳ್ಳುವುದೊಳಿತು. ಸಂಖ್ಯಾಬಾಹುಳ್ಯದ ಮೇಲೆ ಅಥವಾ ತೋಳ್ಬಲದ ಮೇಲೆ ದೇವಸ್ಥಾನದಲ್ಲಿ ಕುಳಿತಿರುವ ದೇವರೂ ಬದಲಾಗುವುದಾದರೆ ಈಶ್ವರನ ದೇವಾಲಯವು ಇಂದು ವಿಷ್ಣುವಿನ ದೇವಾಲಯವಾದಂತೆ ಮುಂದೆ ಮಸೀದಿಯೂ ಆದೀತು, ಚರ್ಚೂ ಆದೀತು ಎಂಬ ಊಹನೆಯನ್ನೂ ನಾವು ನಂಬಲೇಬೇಕಾಗುತ್ತದೆ. ಅಂದು ರಾಮಮಂದಿರವನ್ನು ಒಡೆದು ಮಸೀದಿ ಕಟ್ಟಿದ ಬಾಬರನ ಕೃತ್ಯವನ್ನೂ ಒಪ್ಪಲೇಬೇಕಾಗುತ್ತದೆ. ದೇವರು ಒಬ್ಬನೆ ಆಗಿರುವುದರಿಂದ ಅವನಿಗೆ ಪೂಜೆ ಮಂದಿರದಲ್ಲಿ ಸಂದರೂ ಒಂದೆ, ಪ್ರಾರ್ಥನೆ ಮಸೀದಿಯಲ್ಲೂ ಸಂದರೂ ಒಂದೇ ಅಲ್ಲವೇ.


**ಸಂಪಾದಕ ಮಂಡಳಿ**

ಡಾ। ವೈ. ಸುದರ್ಶನ ರಾವ್, ಕುಕ್ಕಿಕಟ್ಟೆ
ಶ್ರೀ ವೈ. ಮೋಹನ ರಾವ್, ಬ್ರಹ್ಮಗಿರಿ
ಶ್ರೀ ಹೆಚ್.ಎನ್.ಶ್ಯಾನುಭಾಗ್, ಅಂಬಲ್ಪಾಡಿ
ಶ್ರೀ ಟಿ. ಸುರೇಶ್ ರಾವ್, ನಿಟ್ಟೂರು
ಶ್ರೀ ವೈ. ಪ್ರಕಾಶ್ ಕುಮಾರ್, ಕುಕ್ಕಿಕಟ್ಟೆ


**ಸ್ಥಾನಿಕ ಬ್ರಾಹ್ಮಣರ ದೇವಸ್ಥಾನಗಳ ಪರಿಚಯ ಮಾಲೆ-28**

## ಶ್ರೀ ಸುಬ್ರಹ್ಮಣ್ಯೇಶ್ವರ ಕ್ಷೇತ್ರ, ಚೌಳಿಕೆರೆ, ಬಾರ್ಕೂರು





ಉಡುಪಿಯಿಂದ ಕುಂದಾಪುರಕ್ಕೆ ಹೋಗುವ ದಾರಿಯಲ್ಲಿ ಬ್ರಹ್ಮಾವರದಲ್ಲಿ ಬಲಕ್ಕೆ ಬಾರ್ಕೂರಿಗೆ ಹೋಗುವ ದಾರಿ ಸಿಗುತ್ತದೆ. ಬಾರ್ಕೂರಿನಲ್ಲಿ 365 ದೇವಸ್ಥಾನಗಳಿವೆ. ಇದು ಒಂದು ಕಾಲದಲ್ಲಿ ವಿಜಯನಗರದ ಸಾಮಂತರಾಗಿದ್ದ ಪಾಂಡ್ಯರ ರಾಜಧಾನಿ. ಇದರ ಆಡಳಿತದಲ್ಲಿ ರಾಜ್ಯಪಾಲರಾಗಿ ನಿಷ್ಠೆಯಿಂದ ಸೇವೆ ಸಲ್ಲಿಸಿದವರು ಸ್ಥಾನಿಕ ಬ್ರಾಹ್ಮಣರು ಎಂದು ಇತಿಹಾಸಗಳಿಂದ ತಿಳಿದು ಬರುತ್ತದೆ. ಬಾರಕೂರಿನ ಬಳಿಯ ಚೌಳಿಕೆರೆ ಎಂಬಲ್ಲಿ ಸುಮಾರು 800 ವರ್ಷಗಳಿಂದ ಚೌಳಿಕೆರೆ ಕುಟುಂಬದವರು ಆರಾಧಿಸಿಕೊಂಡು ಬಂದಿರುವಂತಹ ಸುಬ್ರಹ್ಮಣ್ಯ ಕ್ಷೇತ್ರವಿದು. ಚೌಳಿಕೆರೆ ಕುಟುಂಬಸ್ಥರು ಶ್ರೀಕ್ಷೇತ್ರ ಧರ್ಮಸ್ಥಳದಲ್ಲಿ ಪಡಿತ್ತಾಯರಾಗಿಯೂ, ಹಿರಿಯಡ್ಕದಲ್ಲಿ ಪಾತ್ರಿಗಳಾಗಿಯೂ, ಕಮಲಶಿಲೆ ದುರ್ಗೆ ಮತ್ತು ಬಾರ್ಕೂರಿನ ಅನೇಕ ದೇವಾಲಯಗಳಲ್ಲಿ ನಾಗಬ್ರಹ್ಮ-ದುರ್ಗೆಯ ಪಾತ್ರಿಗಳಾಗಿಯೂ ಸೇವೆ ಸಲ್ಲಿಸಿಕೊಂಡು ಬಂದಿರುತ್ತಾರೆ.

ಈ ಕ್ಷೇತ್ರದಲ್ಲಿ ಮುಖ್ಯವಾಗಿ ನಾಗದೇವರ ಸನ್ನಿಧಿ ಇದೆ. ನಾಗದೇವರ ರೂಪದಲ್ಲಿ ಶ್ರೀ ಸುಬ್ರಹ್ಮಣ್ಯನನ್ನು ಆರಾಧಿಸುತ್ತಾರೆ. ಈ ಕುಟುಂಬದವರ ಮನೆಯಲ್ಲಿ 800 ವರ್ಷಗಳಿಂದ ಪೂಜಿಸಿಕೊಂಡು ಬರುತ್ತಿರುವ ಶಿವಲಿಂಗ ಹಾಗೂ ಸುದರ್ಶನ ಸಾಲಿಗ್ರಾಮ ಇದೆ. ನಾಗದೇವರ ಸನ್ನಿಧಿಯ ಹಿಂಬದಿಯಲ್ಲಿ 800 ವರ್ಷಗಳ ಹಿಂದಿನ ಆಲದ ಮರವಿದೆ. ಶ್ರೀ ಕ್ಷೇತ್ರದಲ್ಲಿ ಆಶ್ಲೇಷಾ ಬಲಿ, ಸರ್ಪಸಂಸ್ಕಾರ, ನಾಗಮಂಡಲ, ಪವಮಾನ ಕಲಶ, ಢಕ್ಕೆ ಬಲಿ ಇತ್ಯಾದಿ ಸೇವೆಗಳು ನಡೆಯುತ್ತವೆ. ಷಷ್ಠಿ ದೀಪೋತ್ಸವ ಇಲ್ಲಿ ವಿಶೇಷ. ಈ ಕ್ಷೇತ್ರದ ಧರ್ಮದರ್ಶಿಗಳಾಗಿ ಶ್ರೀ ರಾಘವೇಂದ್ರ ಭಟ್ ಇವರು ವಂಶಪಾರಂಪರ್ಯವಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಇವರು ಇಲ್ಲಿನ ಖ್ಯಾತ ಜ್ಯೋತಿಷಿಗಳೂ ಹೌದು. ಕುಟುಂಬದವರ ದೇವಸ್ಥಾನವಾಗಿದ್ದರೂ ಊರವರು ಹಾಗೂ ದೇಶ ವಿದೇಶಗಳ ಭಕ್ತರಿಂದ ಇಲ್ಲಿ ಪೂಜೆ ಪುನಸ್ಕಾರಗಳು ನಿರಂತರವಾಗಿ ನಡೆಯುತ್ತಿದೆ. ತಾ.21-01-2018ರಂದು ಶ್ರೀಕ್ಷೇತ್ರದಲ್ಲಿ ಶತಚಂಡಿಕಾಯಾಗವು ನಡೆಯಲಿದ್ದು, ಎಲ್ಲಾ ಸಮಾಜ ಬಾಂಧವರು ಆಗಮಿಸಿ, ಶ್ರೀದೇವಿಯ ಹಾಗೂ ಶ್ರೀ ಸುಬ್ರಹ್ಮಣ್ಯ ದೇವರ ಗಂಧಪ್ರಸಾದವನ್ನು ಸ್ವೀಕರಿಸಿ ಹಾಗೂ ಮಧ್ಯಾಹ್ನದ ಅನ್ನಪ್ರಸಾದವನ್ನೂ ಸ್ವೀಕರಿಸಬೇಕೆಂದು ಧರ್ಮದರ್ಶಿಗಳಾದ ಶ್ರೀ ರಾಘವೇಂದ್ರ ಭಟ್ ಇವರು ವಿನಂತಿಸಿದ್ದಾರೆ.

ಹೆಚ್ಚಿನ ಮಾಹಿತಿಗಾಗಿ ಶ್ರೀ ರಾಘವೇಂದ್ರ ಭಟ್ ಇವರನ್ನು 9632302234ರಲ್ಲಿ ಸಂಪರ್ಕಿಸಬಹುದು.








# ಶ್ರೀಮಚ್ಛಂಕರಭಗವತ್ಪಾದಾಚಾರ್ಯ ಸಹಸ್ರನಾಮಾವಳಿ

–ಡಾ| ಪಿ.ವಿ.ಸತ್ಯನಾರಾಯಣ

ಪವಿತ್ರಭಾರತ ಜನ್ಮಕೊಟ್ಟ ಅಸಾಧಾರಣ ತತ್ತ್ವಜ್ಞಾನಿಗಳಲ್ಲಿ ಶ್ರೀ ಆದಿಶಂಕರ ಭಗವತ್ಪಾದರು ಪ್ರಮುಖರು. ಅತಿ ಕಡಿಮೆ ಅವಧಿಯಲ್ಲಿ ಈ ದೇಶದ ಚರಿತ್ರೆ ಮತ್ತು ಸಂಸ್ಕೃತಿಯ ಮಾರ್ಗವನ್ನೇ ಬದಲಿಸಿದ ಮಹಾಪುರುಷರು ಅವರು. ಪವಾಡ ಸದೃಶವಾದ ತಮ್ಮ ಜೀವನ-ಸಾಧನೆಗಳ ಮೂಲಕ ಸನಾತನ ಧರ್ಮಕ್ಕೆ ನೆಲೆ-ಬೆಲೆಗಳನ್ನು ದೊರಕಿಸಿಕೊಟ್ಟ ಅದ್ಭುತ ವ್ಯಕ್ತಿತ್ವ ಅವರದು. ಭಾರತೀಯ ತತ್ತ್ವಶಾಸ್ತ್ರದ ಇತಿಹಾಸದಲ್ಲಿ ಅವರು ಪ್ರತಿಪಾದಿಸಿದ ಅದ್ವೈತ ವೇದಾಂತ ಬಹಳ ಮುಖ್ಯವಾದ ಒಂದು ಸಿದ್ಧಾಂತ.

ಸನಾತನ ಧರ್ಮದ ಸಂರಕ್ಷಣೆ, ಉಪನಿಷತ್ ಪ್ರತಿಪಾದಿತವಾದ ಅದ್ವೈತ ಸಿದ್ಧಾಂತದ ಪ್ರತಿಪಾದನೆ. ಸ್ತೋತ್ರ-ಭಾಷ್ಯಾದಿ ಗ್ರಂಥಗಳ ರಚನೆ, ದೇಶ ಪರ್ಯಟನೆ, ಆಮ್ನಾಯಪೀಠಗಳ ಸ್ಥಾಪನೆ – ಹೀಗೆ ಅವರು ಮಾಡಿದ ಲೋಕೋಪಕಾರಗಳು ಒಂದೆರಡಲ್ಲ. ಪ್ರಾತಃಸ್ಮರಣೀಯವಾದ ಅವರನ್ನು ಪ್ರತಿನಿತ್ಯ ಭಕ್ತಿಯಿಂದ ಸ್ಮರಿಸಿ, ಪೂಜಿಸುವುದು ನಮ್ಮೆಲ್ಲರ ಕರ್ತವ್ಯ.

'ಹರೇರ್ನಾಮೈವ ನಾಮೈವ ನಾಮೈವ ಮಮ ಜೀವನಂ। ಕಲೌನಾಸ್ತ್ಯೇವ ನಾಸ್ತ್ಯೇವ ನಾಸ್ತ್ಯೇವ ಗತಿರನ್ಯಥಾ'॥ – ಎಂಬಂತೆ ಕಲಿಯುಗದಲ್ಲಿ ಭಗವನ್ನಾಮ ಸ್ಮರಣೆಗೆ ವಿಶೇಷವಾದ ಮಹತ್ತ್ವವಿದೆ. ಆದ್ದರಿಂದ ನಾವು ದ್ವಾದಶ, ಚತುರ್ವಿಂಶತಿ, ಅಷ್ಟೋತ್ತರ ಶತ, ತ್ರಿಶತಿ, ಸಹಸ್ರನಾಮಗಳಿಂದ ಭಗವಂತನನ್ನು ಆರಾಧಿಸುತ್ತೇವೆ. ಶೃಂಗೇರಿ ಶ್ರೀ ಶಾರದಾಪೀಠದ ಪರಮಪೂಜ್ಯ ಜಗದ್ಗುರುಗಳವರು ಶ್ರೀ ಶಂಕರಭಗವತ್ಪಾದರ ಪುಣ್ಯಸ್ಮರಣೆಯು ಪ್ರತಿಯೊಬ್ಬರಿಗೂ ಸಕಲ ಶ್ರೇಯಃ ಪ್ರದವಾದುದೆಂದು ಅವರ 'ಅಷ್ಟೋತ್ತರ ಶತನಾಮ ಯಜ್ಞ'ವನ್ನು ದೇಶಾದ್ಯಂತ ಪ್ರವರ್ತಿಸಿದ್ದಾರೆ. ಆದರೆ ಭಗವತ್ಪಾದರ ಸಹಸ್ರನಾಮಗಳು ಅಷ್ಟೊಂದು ಪ್ರಚಲಿತದಲ್ಲಿಲ್ಲ. ಶಂಕರ ಜಯಂತಿ ಮೊದಲಾದ ವಿಶೇಷ ಸಂದರ್ಭಗಳಲ್ಲಿ ಅವರ ಪೂಜೆಗೆ ಸಹಸ್ರನಾಮಗಳ ಅವಶ್ಯಕತೆ ಬಹಳವಾಗಿ ಇದೆ ಎಂದು ಮನಗಂಡು ವಿಕಾಸ ಪ್ರಕಾಶನದವರು ಅದನ್ನು ಕನ್ನಡದಲ್ಲಿ ಪ್ರಕಟಿಸಿರುವುದು ಅತ್ಯಂತ ಶ್ಲಾಘನೀಯ. ಜಗದ್ಗುರುಗಳ ಅನುಗ್ರಹ ಸಂದೇಶ, ಸ್ತೋತ್ರ, ನಾಮಾವಳಿ, ಸೇವಾಪದ್ಯಾವಳಿ, ಏಕಶ್ಲೋಕ ಶಂಕರ ವಿಜಯ ಇತ್ಯಾದಿಗಳನ್ನು ಒಳಗೊಂಡ ಈ ಪುಸ್ತಕ ಸರ್ವಾಂಗ ಸುಂದರವಾಗಿ ಮೂಡಿಬಂದಿದೆ.




**ಲೇಖಕರು :** ಡಾ|ಎಚ್.ವಿ.ನರಸಿಂಹಮೂರ್ತಿ, ಕುಂದಾಪುರ, **ಪ್ರಕಾಶಕರು :** ವಿಕಾಸ ಪ್ರಕಾಶನ, ಚೇತನ, ನೇರಂಬಳ್ಳಿ ರಸ್ತೆ, ಕೋಟೇಶ್ವರ ಅಂಚೆ-576222, ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ. ದೂರವಾಣಿ : 08254-261145 **ಪುಟಗಳು :** 136, ಬೆಲೆ : ರೂ.70/-

ಈ ಸಹಸ್ರನಾಮಸ್ತೋತ್ರವು ಆಚಾರ್ಯ ಶಂಕರರ ಜೀವನ, ವ್ಯಕ್ತಿತ್ವ ಮತ್ತು ಅವರು ಮಾಡಿದ ಅದ್ಭುತ ಕಾರ್ಯಗಳನ್ನು ಸುಂದರವಾಗಿ ನಿರೂಪಿಸುತ್ತದೆ. ಮಾದವೀಯ ಶಂಕರ ದಿಗ್ವಿಜಯವನ್ನು ಆಧಾರವಾಗಿಟ್ಟುಕೊಂಡು ರಚಿಸಲಾದ ಇದು ಕಾವ್ಯಗುಣಗಳಿಂದ ಕೂಡಿದ್ದು, ಪಾರಾಯಣ ಕಾಲದಲ್ಲಿ ಭಗವತ್ಪಾದರ ಜೀವನ ಚರಿತ್ರೆಯು ಕಣ್ಮುಂದೆ ಸುಳಿಯುತ್ತದೆ.

ಅನೇಕ ವರ್ಷಗಳ ಹಿಂದೆ ಸಂಸ್ಕೃತ ಮತ್ತು ತಮಿಳು ಲಿಪಿಯಲ್ಲಿ ಪ್ರಕಟವಾಗಿದ್ದ ಈ ಶ್ರೀಮಚ್ಛಂಕರ ಭವತ್ಪಾದಾಚಾರ್ಯ ಸಹಸ್ರನಾಮ ಸ್ತೋತ್ರವನ್ನು ಇದೀಗ ಕನ್ನಡದಲ್ಲಿ ಪ್ರಕಟಿಸಿರುವುದು ಕನ್ನಡಿಗರಿಗೆಲ್ಲ ಪರಮಾನಂದವನ್ನು ಉಂಟು ಮಾಡಿದೆ. ಆಕರ್ಷಕ ವಿನ್ಯಾಸ – ಇತ್ಯಾದಿಗಳಿಂದ ಕೂಡಿದ ಈ ಪುಸ್ತಕವು ಸಂಗ್ರಹ ಯೋಗ್ಯವಾಗಿದೆ. ಆಸ್ತಿಕರೆಲ್ಲರ ಮನೆಗಳಲ್ಲಿ ಪ್ರತಿನಿತ್ಯ ಆಚಾರ್ಯರ ಪುಣ್ಯಪ್ರದ ಸಹಸ್ರನಾಮಾವಳಿಯು ಅನುರಣಿಸಲಿ; ನಾಡಿನಾದ್ಯಂತ ವ್ಯಾಪಿಸಿರುವ ಶಂಕರ ಮಠಗಳಲ್ಲಿ ಇದರಲ್ಲಿರುವ ಶ್ರೀಮದಾಚಾರ್ಯ ಸೇವಾ ಪದ್ಯಾವಳಿಯೊಂದಿಗೆ ಅಷ್ಟಾವಧಾನ ಸೇವೆ ನಡೆಯಲಿ; ತನ್ಮೂಲಕ ಎಲ್ಲರಿಗೂ ಶ್ರೇಯಸ್ಸು ಲಭಿಸಲಿ–ಎಂದು ಹಾರೈಸೋಣ.

**Buying and selling shares as easy as checking your emails**

**Sharekhan Online Trading Account Features:**

- Your bank account gets directly linked to trading account
- Can do direct fund transfer from any of 11 leading banks
- Choose your trading account, Classic, FastTrade, TradeTiger
- Apply online for Stocks, Mutual Funds and IPO's

Contact : Pradeep Rao K.
Tel : 0824 2412903, 9448191028
Navadurga Share Services
Email : navdurga@bp.sharekhan.com

Sharekhan
YOUR GUIDE TO THE FINANCIAL JUNGLE

Visit : www.sharekhan.com

Sharekhan Ltd.: BSE Cash-INB011073351; F&O-INF011073351; CD-INE011073351; NSE - INB/ INF231073330; CD - INE231073330; MCX Stock Exchange : CD - INE261073330 DP: NSDL-IN-DP-NSDL-233-2003; CDSL -IN-DP-CDSL- 271-2004; PMS INP000000662; Mutual Fund: ARN 20669. Sharekhan Commodities Pvt.Ltd.: MCX- 10080(MCX/TCL/CORP/0425); NCDEX -00132; (NCDEX/TCM/CORP/0142); for any complaints email at igc@sharekhan.com. Regd Add:- A-206, Phoenix House, Phoenix Mills Compound, Senapati Bapat Marg, Lower Parel, Mumbai- 400013.Investing in equities & commodities future involves risk. Please carefully read the risk disclosure document as prescribed by SEBI & relevant exchanges and Do's & Don'ts by NCDEX. (Subbroker Regn.Nos: BSE: INS010606122;NSE: INS23106924)




# ಅಮೆರಿಕಾ–ಅಮೆರಿಕಾ

– ವೈ. ಮೋಹನ ರಾವ್

ಅಮೆರಿಕಾ–ಅಮೆರಿಕಾ ಎಂಬ ಹೆಸರಿನ ಸಿನೆಮಾ ಕೆಲವು ವರ್ಷಗಳ ಹಿಂದೆ ಬಂದದ್ದು ನಮಗೆ ಗೊತ್ತಿದೆ. ಆದರೆ ಇದು ಅದಲ್ಲ. ಇದು ಸಿ.ಎಸ್.ರಾಯರು ಬರೆದ ಕೃತಿ ಅಮೆರಿಕಾ–ಅಮೆರಿಕಾ. ಈ ಕೃತಿಯಲ್ಲಿ ಸಿ.ಎಸ್.ರಾಯರು ತಾವು ಅಮೆರಿಕಾವನ್ನು ಸಂದರ್ಶಿಸಿದ ಪ್ರವಾಸ ಅನುಭವವನ್ನು ವರ್ಣಿಸಿದ್ದಾರೆ. ಹದಿನೈದು ವರ್ಷಗಳ ಅವಧಿಯಲ್ಲಿ ಐದು ಬಾರಿ ಸಿ.ಎಸ್.ರಾವ್ ಅಮೆರಿಕಾವನ್ನು ಸುತ್ತಾಡಿದರು. ಐದನೇ ಬಾರಿಯ ಪ್ರವಾಸ ನಂತರ ತಮ್ಮ ಅನುಭವವನ್ನು ಆಂಗ್ಲ ಭಾಷೆಯಲ್ಲಿ ಬರೆದ ಇವರ ಮೊದಲ ಕೃತಿ ಇದು.

"PREFACE" by C.S.Rao - "I have visited more than fifteen countries, from east to west like China, Hong Kong, Malaysia, Singapore, Thailand, Srilanka, Nepal, U.A.E., Mauritius, France, Italy, Switzerland, Mexico, USA and Canada, but never written any travel experience. I am active in Udupi Senior Citizen's Movement and at present working as president of Udupi Senior Citizen's Association. Sri Bhuvana Prasad Hegde is our active committee member. It is on his insistence and motivation, I have written this book titled America-AMERICA. He has gone through the book, edited and gave suggestions to improve the writing. I am very grateful to him.

ಸಿ.ಎಸ್.ರಾಯರು ಕೃತಿಯ ಮುನ್ನುಡಿಯಲ್ಲಿ ಹೀಗೆ ಹೇಳುತ್ತಾರೆ – ''ಪೂರ್ವದಿಂದ ಪಶ್ಚಿಮ, ಉದಾಹರಣೆಗಾಗಿ ಚೀನಾ, ಹಾಂಕಾಂಗ್, ಮಲೇಶಿಯಾ, ಸಿಂಗಾಪುರ, ಥ್ಯಾಲ್ಯಾಂಡ್, ಶ್ರೀಲಂಕಾ, ನೇಪಾಲ, ಯು.ಎ.ಇ., ಮಾರಿಶಸ್, ಫ್ರಾನ್ಸ್, ಇಟೆಲಿ, ಸಿಜರ್‌ಲ್ಯಾಂಡ್, ಮೆಕ್ಸಿಕೊ, ಯುಎಸ್‌ಎ ಮತ್ತು ಕೆನಡದಂತಹ ಹದಿನಾಲ್ಕಕ್ಕಿಂತಲೂ ಹೆಚ್ಚು ದೇಶಗಳನ್ನು ಸಂದರ್ಶಿಸಿದ್ದೆ. ಆದರೆ ನಾನು ಪ್ರವಾಸ ಕಥನವನ್ನು ಎಂದೂ ಬರೆಯಲಿಲ್ಲ. ನಾನು ಉಡುಪಿ ಹಿರಿಯ ನಾಗರಿಕ ಚಳುವಳಿಯಲ್ಲಿ ಸಕ್ರಿಯನಾಗಿದ್ದೇನೆ. ಮತ್ತು ಈಗ ಉಡುಪಿ ಹಿರಿಯ ನಾಗರಿಕ ಸಂಘಟನೆಯ ಅಧ್ಯಕ್ಷನಾಗಿದ್ದೇನೆ. ಶ್ರೀ ಭುವನಪ್ರಸಾದ್ ಹೆಗ್ಡೆ ನಮ್ಮ ಕಮಿಟಿಯ ಸಕ್ರಿಯ ಸದಸ್ಯರಾಗಿದ್ದಾರೆ. ಅವರ ಒತ್ತಾಯ ಮತ್ತು ಪ್ರೇರಣೆಯಿಂದಾಗಿಯೇ ನಾನು ಅಮೆರಿಕಾ–ಅಮೆರಿಕಾ ಹೆಸರಿನ ಈ ಪುಸ್ತಕವನ್ನು ಬರೆದೆ. ಅವರು ಈ ಪುಸ್ತಕವನ್ನು ಓದಿ, ಸಂಪಾದಿಸಿ ಮತ್ತು ಸಲಹೆಗಳನ್ನು ನೀಡಿದ ಕಾರಣ ನನ್ನ ಬರಹವನ್ನು ಸುಧಾರಿಸಲು ಸಾಧ್ಯವಾಯಿತು. ನಾನು ಅವರಿಗೆ ತುಂಬಾ ಋಣಿಯಾಗಿದ್ದೇನೆ''.

"ABOUT THE BOOK" by H. Shantharaj Ithal, Trustee-Consumer Forum Udupi, President-Su Ha Sam Udupi - "Mr. Rao had the unique privilege of visiting the United States not once or twice but for five times in a span of some 15 years. It is only after fifth visit that he brought forth his nostalgic experiences in an elaborate and interesting manner. As rightly pointed out by the author, describing America is a mammoth exercise. It is similar to the tale of five blind men touching parts of an elephants body and explaining what they felt !"




ಕೃತಿ : **ಅಮೆರಿಕಾ ಅಮೆರಿಕಾ** ಲೇಖಕರು : **ಸಿ.ಎಸ್.ರಾವ್, ಚಿಟ್ಪಾಡಿ** ಪ್ರಕಾಶಕರು : **ಸಿ.ಸುನಂದ ರಾವ್ ಚಿಟ್ಪಾಡಿ, ಉಡುಪಿ** ಬೆಲೆ : **ರೂ.100/-**

ಪುಸ್ತಕದ ಬಗ್ಗೆ ಹೆಚ್.ಶಾಂತರಾಜ ಐತಾಳ್, ಬಿ.ಇ. ಇವರು ಹೀಗೆ ಹೇಳುತ್ತಾರೆ ''ಹದಿನೈದು ವರ್ಷಗಳ ಅವಧಿಯಲ್ಲಿ ಅಮೆರಿಕಾವನ್ನು ಐದು ಸಲ ಸಂದರ್ಶಿಸುವ ವಿಶೇಷ ಗೌರವ ಸಿ.ಎಸ್.ರಾವ್ ಅವರಿಗೆ ಒದಗಿದೆ. ಅವರು ಐದನೇ ಬಾರಿ ಅಮೆರಿಕಾವನ್ನು ಸಂದರ್ಶಿಸಿದ ನಂತರವೇ ಅಪಾರ ಅನುಭವನ್ನು ಬಹಳ ವಿವರವಾದ ಮತ್ತು ಆಸಕ್ತಿಯುತವಾದ ರೀತಿಯಲ್ಲಿ ಬರೆಯಲು ಸಾಧ್ಯವಾಯಿತು. ಗ್ರಂಥಕರ್ತರು ಹೇಳಿರುವಂತೆ ಅಮೆರಿಕಾವನ್ನು ವರ್ಣಿಸುವುದು ಒಂದು ದೊಡ್ಡ ಅನುಭವವೇ ಸರಿ. ಐದು ಜನ ಅಂಧರು ಆನೆಯ ದೇಹದ ಭಾಗಗಳನ್ನು ಮುಟ್ಟಿ ತಮ್ಮ ಅನುಭವವನ್ನು ತಿಳಿಸಿದ ಕಥೆಯ ಹಾಗೆ ಇದು''

"FOREWARD" by Dr.Y.Avanindra natha Rao, ALIO, Central Secretariat Library, Ministry of Culture, Govt. of India, New Delhi - "Another significance of this book lies in its bringing forth the important sightseeing places visited by the author. His visit to world famous Casino Centre at Las Vegas, attractive Swami Narayana Temple at Toronto (Canada), his travelling in Cruise ship to Victoria Island, his experience in world famous film studio, Hollywood etc are not only informative, but fascinating to go through".

ಕೃತಿಯ ಮುನ್ನುಡಿಯಲ್ಲಿ ಡಾ| ವೈ. ಅವನೀಂದ್ರ ನಾಥ ರಾವ್ ಹೇಳುತ್ತಾರೆ–''ಈ ಕೃತಿಯ ಇನ್ನೊಂದು ಪ್ರಾಮುಖ್ಯತೆ ಏನೆಂದರೆ ಲೇಖಕರು ಸಂದರ್ಶಿಸಿದ ಪ್ರಮುಖ ಸ್ಥಳಗಳು. ಟೊರೆಂಟೋ(ಕೆನಡಾ)ದ ಜಗತ್ಪ್ರಸಿದ್ಧ ಸ್ವಾಮಿ ನಾರಾಯಣ ದೇವಸ್ಥಾನ, ವಿಕ್ಟೋರಿಯಾ ದ್ವೀಪದಲ್ಲಿನ ಕ್ರೂಸ್ ಶಿಪ್‌ನಲ್ಲಿನ ಪಯಣ, ಜಗತ್ಪ್ರಸಿದ್ಧ ಹಾಲಿವುಡ್ ಸಿನೆಮಾ ಮಂದಿರದ ಅನುಭವನ ಇತ್ಯಾದಿಗಳು ಮಾಹಿತಿಯನ್ನು ನೀಡುವುದಲ್ಲದೆ ಅಲ್ಲಿಗೆ ಸಂದರ್ಶಿಸಲು ಆಕರ್ಷಿಸುತ್ತವೆ.''

ಈ ಪುಸ್ತಕದ ಬಗ್ಗೆ ಹಲವರ ಅಭಿಪ್ರಾಯವನ್ನು ಕೃತಿಯಲ್ಲಿ ತಿಳಿಸಲಾಗಿದೆ. ಸಿ.ಎಸ್.ರಾಯರು ಅಮೆರಿಕಾ ದೇಶವನ್ನು ಸಂದರ್ಶಿಸಿದುದು ಬಹಳ ಆಕರ್ಷಣೀಯ ರೀತಿಯಲ್ಲಿ ಈ ಕೃತಿಯಲ್ಲಿ ಕಂಡು ಬರುತ್ತದೆ. ಹದಿನೆಂಟಕ್ಕೂ ಹೆಚ್ಚು ಆಕರ್ಷಣೀಯ ಬಣ್ಣದ ಚಿತ್ರಗಳು ಈ ಕೃತಿಯಲ್ಲಿವೆ. ನಾನೇನೂ ಅಮೆರಿಕಾಕ್ಕೆ ಹೋಗಿಲ್ಲ. ಆದರೆ ಅಮೆರಿಕಾಕ್ಕೆ ಹೋದಷ್ಟೆ ಸಂತೋಷ ಈ ಕೃತಿಯನ್ನು ಓದಿದುದರಿಂದ ನನಗೆ ಲಭಿಸಿತು.

With Best Compliments From :

Ph : 98459 92859

**Ganesh Hebbar & Associates**
CHARTERED ACCOUNTANT
S.M.S.P. Complex, Udupi - 576 101.

# ಚಿತ್ರಾಪು ಶ್ರೀಮತಿ ದಿ। ಪ್ರಭಾವತೀ ಅಮ್ಮನವರ ಸಂಸ್ಮರಣೆ–ಸಂಮಾನ–ಯಕ್ಷಗಾನ



ತನ್ನ ಬದುಕಿನ ಉದ್ದಕ್ಕೂ ಕಲೆ ಕಲಾವಿದರ ಬಗೆಗಿನ ಅತೀವ ಪ್ರೀತಿಯೇ ಸದಾ ಮಾತಿನಲ್ಲಿ ಮತ್ತು ಹೃದಯದಲ್ಲಿ ತುಂಬಿಕೊಂಡು ತನ್ನ ಜೀವನಕ್ಕೆ ಉಸಿರೇ ಯಕ್ಷಗಾನವಾಗಿಸಿಕೊಂಡ ಉತ್ಕಟ ಕಲಾಪ್ರೇಮಿ, ಚಿಂತಕಿ, ಕಲಾವಿದರ ಆಶ್ರಯತಾಣ ಚಿತ್ರಾಪು ಮನೆಯ ಒಡತಿ ಸ್ನೇಹಮಯಿ ದಿ। ಪ್ರಭಾವತಿಅಮ್ಮ. ಕಟೀಲು ದೇವಿಯ ಒಂದು ಆಟ ನೋಡುವುದರಿಂದ ಏಳು ರಂಗ ಪೂಜೆ ನೋಡಿದಷ್ಟು ಫಲ ಇದೆ ಎಂದು ನಂಬಿಕೆ ಇಟ್ಟ ಪ್ರಭಾವತಿಅಮ್ಮ ವರುಷಕ್ಕೆ 120ಕ್ಕೂ ಹೆಚ್ಚು ಬಯಲಾಟ ನೋಡುತ್ತಿದ್ದು ಅನೇಕ ಮಹಿಳೆಯರನ್ನು ತನ್ನ ಬಳಗವಾಗಿಸಿಕೊಂಡು ಮನೆಯ ಸುತ್ತಲಿನವರಿಗೆ ಈ ಕಲೆಯಲ್ಲಿ ಆಸಕ್ತಿ ಬೆಳೆಯುವಂತೆ ಮತ್ತು ಅದೊಂದು ಭಕ್ತಿಯ ನೆಲೆ ಎಂದು ತಿಳಿದು ಶ್ರದ್ಧೆಯಿಂದ ರಾತ್ರಿ ಪೂರ್ತಿ ಆಟ ನೋಡುತ್ತಿದ್ದ ದಿ। ಚಿತ್ರಾಪು ಪ್ರಭಾವತಿ ಶೇಖರ ರಾವ್ ಇವರ ವರ್ಷಾಂತಿಕ ಕಾರ್ಯಕ್ರಮದಂದು ಅವರ ಸುಪುತ್ರ ಕಲಾವಿದ ಶಶಿಧರ ರಾವ್ ಮತ್ತು ಮನೆಯವರು ಆಯೋಜಿಸಿದ ಕಾರ್ಯಕ್ರಮವೇ ಅಮ್ಮನ ಸಂಸ್ಮರಣೆ, ಗುರುಗಳ ಸಂಮಾನ, ಯಕ್ಷಗಾನ.

ಈ ಕಾರ್ಯಕ್ರಮದ ಅಧ್ಯಕ್ಷ ಸ್ಥಾನದಿಂದ ಮಾತಾಡಿದ ಧರ್ಮದರ್ಶಿ ಶ್ರೀ ಹರಿಕೃಷ್ಣ ಪುನರೂರು ಯಕ್ಷಗಾನ ಅನೇಕ ವರುಷಗಳಿಂದ ಬೆಳೆದು ಬಂದ ದಾರಿ ಮತ್ತು ಈ ಕಲೆಗೆ ಹಿಂದಿನ ಪ್ರೇಕ್ಷಕರು ಕೊಡುತ್ತಿದ್ದ ಗೌರವ, ಭಕ್ತಿ, ಶ್ರದ್ಧೆಯಿಂದಲಾಗಿ ಕಲೆ ಉಳಿದಿದೆ. ನಮ್ಮ ಸಂಪ್ರದಾಯಗಳಲ್ಲಿ ನಮಗೆ ಅಚಲವಾದ ನಂಬಿಕೆ ಇದ್ದರೆ ಮಾತ್ರ ಉತ್ತಮ ಸಂಸ್ಕಾರವಂತ ಸಮಾಜ ನಿರ್ಮಾಣವಾಗುತ್ತದೆ. ಹಿಂದಿನವರು ಆ ನೆಲೆಗಟ್ಟಿನಿಂದ ಬಂದವರು ಆದ್ದರಿಂದ ನಮಗೆ ಅವರ ಹಾದಿ ಅನುಕರಣೀಯ ಮತ್ತು ಅನುಸರಣೀಯ ಎಂದರು.

ದಿ। ಪ್ರಭಾವತಿ ಅಮ್ಮನವರ ಸಂಸ್ಮರಣಾ ಭಾಷಣ ಮಾಡಿದವರು ಅವರ ಅಳಿಯ ಬೆಳುವಾಯಿಯ ದೇವಾನಂದ ಭಟ್. ಯಕ್ಷಗಾನ ಹಿಮ್ಮೇಳ ಗುರುಗಳಾದ ಮಾಂಬಾಡಿ ಸುಬ್ರಹ್ಮಣ್ಯ ಭಟ್ ಅವರನ್ನು ತನ್ನ ಯಕ್ಷಗಾನ ಭಾಗವತಿಕೆಯ ಗುರುಗಳು ಎಂಬ ನೆಲೆಯಲ್ಲಿ ಇದೇ ವೇದಿಕೆಯಲ್ಲಿ ಗಣ್ಯರ ಸಮಕ್ಷಮ ಶಶಿಧರ ರಾವ್ ಮನೆಯವರು ಸಂಮಾನಿಸಿದರು. ಮಾಂಬಾಡಿ ಗುರುಗಳ ಬಗ್ಗೆ ಸಮಯೋಚಿತವಾಗಿ ಅಭಿನಂದನೆ ಮಾಡಿದವರು ಯಕ್ಷಗಾನ ಅರ್ಥಧಾರಿ ಹೊಸಬೆಟ್ಟು ವಿನಯ ಆಚಾರ್ಯರವರು. ಈ ಕಾರ್ಯಕ್ರಮದ ಉದ್ಘಾಟನೆಗೈದವರು ಮುಲ್ಕಿಸೀಮೆಯ ಅರಸರು ಶ್ರೀ ದುಗ್ಗಣ್ಣ ಸಾವಂತರು. ವೇ। ಮೂ। ದೇವರಾಜ ಹೆಬ್ಬಾರ್ ಪಾವಂಜೆ ಆಶೀರ್ವಚನ ವಿತ್ತರು. ಮನೆಯ ಯಜಮಾನ ಶ್ಯಾಮ ವಿ.ರಾವ್ ಮುಂಬೈಯವರ ಉಪಸ್ಥಿತಿಯಲ್ಲಿ ಜರಗಿದ ಈ ಕಾರ್ಯಕ್ರಮದಲ್ಲಿ ಸ್ವಾಗತ ನೀಡಿದವರು ಉಡುಪಿ ತಾಲೂಕು ಬ್ರಾಹ್ಮಣ ಸಭಾದ ಪ್ರಧಾನ ಕಾರ್ಯದರ್ಶಿ ಗಣೇಶ್ ವಿ.ರಾವ್ ಕುಂಭಾಶಿ, ಕಾರ್ಯಕ್ರಮ ನಿರೂಪಣೆಗೈದವರು ಶ್ರೀಮತಿ ಶಾಂತಾ ಜಿ. ರಾವ್.

ಕಾರ್ಯಕ್ರಮದ ಬಳಿಕ ಯಕ್ಷಮಿತ್ರರು ಹಾಗೂ ಜಿಲ್ಲೆಯ ಪ್ರಸಿದ್ಧ ಕಲಾವಿದರ ಕೂಡುವಿಕೆಯಿಂದ 'ರಾಜವಿಕ್ರಮ ' ಯಕ್ಷಗಾನ ಜರಗಿತು. ಶ್ರೀಮತಿ ಸುಮ ಪುಷ್ಪರಾಜ್ ರಾವ್ ರವರು ಕಾರ್ಯಕ್ರಮಕ್ಕೆ ಧನ್ಯವಾದವಿತ್ತರು.

# ರಾಜಕೀಯ ಮೇಲಾಟ (ನನ್ನ ನೆನಪಿನಂಗಳದಿಂದ)

ಲೇಖಕ : **ಜಿ.ಕೆ. ಕೋಲ್ಪೆ**

ರಾಜಕೀಯವೇ ಹಾಗೆ. ಆಡಳಿತದವರು ತಾವೇ ಮೇಲೆಂದು ಹಾರಾಡುತ್ತಿರುವಾಗ ವಿರೋಧ ಪಕ್ಷದವರು ನಾವೇನು ಕಮ್ಮಿಯಿಲ್ಲ ಎನ್ನುತ್ತಾ ಆಡಳಿತದವರ ಕಾಲೆಳೆಯುವುದು ಸ್ವಾಭಾವಿಕ. ಇಸವಿ 1980–83ರ ಮಧ್ಯೆ ರಾಜ್ಯದ ಅರೆಮಲೆನಾಡು ಪ್ರದೇಶದ ಬ್ಯಾಂಕ್ ಶಾಖೆಯೊಂದರಲ್ಲಿ ವ್ಯವಸ್ಥಾಪಕನಾಗಿ ಕಾರ್ಯ ನಿರ್ವಹಿಸುತ್ತಿರುವಾಗ ಎರಡು ಬಲಾಢ್ಯ ರಾಜಕೀಯ ಪಕ್ಷಗಳ ಸಂಘರ್ಷ (ಒಂದು ರೀತಿಯ ಯುದ್ಧವೆಂದರೂ ತಪ್ಪಾಗದು) ಕಣ್ಣಾರೆ ಕಂಡ ಪ್ರಸಂಗ ನಿಮಗಾಗಿ ಇಲ್ಲಿದೆ. ವಿರೋಧ ಪಕ್ಷದಲ್ಲಿದ್ದ ಮುಖಂಡ ಆ ಪಟ್ಟಣದಲ್ಲಿ ಜನಾನುರಾಗಿ ಹಾಗೂ ಶಿಸ್ತಿನ ಮನುಷ್ಯ. ಆಗಿನ ಸರಕಾರದ ಖಾತೆಯೊಂದರ ಮಂತ್ರಿ ಅದೇ ಕ್ಷೇತ್ರದವರಾಗಿದ್ದು ಅಲ್ಲೇ ಹಳ್ಳಿಯೊಂದರಲ್ಲಿ ಸಾಕಷ್ಟು ಆಸ್ತಿ–ಪಾಸ್ತಿ ಮಾಡಿಕೊಂಡಿದ್ದು, ಜನಪರ ಕಾರ್ಯಗಳಲ್ಲಿ ನಿರಾಸಕ್ತಿ ಹೊಂದಿದ್ದರಂತೆ. ಪರ–ವಿರೋಧಗಳಿಂದ ಆ ಕ್ಷೇತ್ರದಲ್ಲಿ ರಾಜಕೀಯ ಹೊಡೆದಾಟ–ಬಡಿದಾಟ ಆಗಾಗ ನಡೆಯುತ್ತಿತ್ತಂತೆ ಮಂತ್ರಿವರ್ಯರು ಆಗಾಗ ಸಭೆ ಸೇರಿಸಿ ಭಾಷಣ ಮಾಡುವಾಗ ವಿರೋಧ ಪಕ್ಷದ ಕಾರ್ಯಕರ್ತರು ಅಡ್ಡಿಪಡಿಸುತ್ತಾ ಇದ್ದು ಅವರು ಅರ್ಧದಲ್ಲೇ ವೇದಿಕೆ ಬಿಟ್ಟು ತೆರಳಿದ್ದೂ ಇತ್ತಂತೆ. ಅದೊಂದು ದಿನ ಮಂತ್ರಿ ಮಹೋದಯರ ಚುನಾವಣಾ ಸಂಬಂಧ ಭಾಷಣವನ್ನು ನನ್ನ ಬ್ಯಾಂಕ್ ಶಾಖೆಯ ಹಿಂಬದಿಗೆ ತಾಗಿರುವ ಬಸ್ ನಿಲ್ದಾಣದಲ್ಲಿ ಆಯೋಜಿಸಲಾಗಿತ್ತು. ವಾರದ ಸಂತೆ ಬೇರೆ. ಬಹಳಷ್ಟು ಹಳ್ಳಿಗರು–ಪಟ್ಟಣವಾಸಿಗಳು ಸೇರಿದ್ದರು. ಭಾಷಣ ಪ್ರಾರಂಭಿಸುತ್ತಿದ್ದಂತೆ, ಗಲಾಟೆ/ಕಲ್ಲು ತೂರಾಟ/ಹೊಡೆದಾಟ ಪ್ರಾರಂಭವಾಯ್ತು. ಸಾಕಷ್ಟು ಪೋಲೀಸ್ ಸಿಬ್ಬಂದಿಗಳಿದ್ದರೂ ಗಲಾಟೆ ನಿಯಂತ್ರಣಕ್ಕೆ ಬರದಿದ್ದಾಗ, ಲಾಠಿಪ್ರಯೋಗ–ಅಶ್ರುವಾಯು ಪ್ರಯೋಗ ಪ್ರಾರಂಭವಾಯ್ತು. ನನ್ನ ಬ್ಯಾಂಕಿನ ಹಿಂಬದಿಗೆ ಹೋಗಿ ನೋಡಿದಾಗ ಕಂಪೌಂಡ್ ಗೋಡೆ ಮೇಲೆ ಬಹಳಷ್ಟು ಕಾರ್ಯಕರ್ತರು ಕೋಲು, ಬಡಿಗೆ ಇತರ ಮಾರಕಾಸ್ತ್ರಗಳೊಂದಿಗೆ ಆ ಕಡೆ–ಈ ಕಡೆ ಓಡಾಡುತ್ತಿದ್ದರು. ಅಶ್ರುವಾಯು ಪ್ರಯೋಗದಿಂದ ನನ್ನ ಶಾಖೆಯ ಒಳಗೂ ಹೊಗೆ ಆವರಿಸಿದ್ದು ಕಣ್ಣು ಉರಿ ಪ್ರಾರಂಭವಾಗಿ, ಭದ್ರತೆಗಾಗಿ ಎದುರಿನ ಬಾಗಿಲನ್ನು ಸ್ವಲ್ಪ ಸಮಯ ಮುಚ್ಚಬೇಕಾಯ್ತು. ಅಂತೂ ಜನರು ದಿಕ್ಕಾಪಾಲಾಗಿ ಓಡಿ ಹೋಗುವಂತಾಯಿತು. ಒಂದೆರಡು ಪೋಲೀಸ್ ವ್ಯಾನುಗಳು–ಜೀಪುಗಳು ಬಸ್ ನಿಲ್ದಾಣದೊಳಗೆ ನುಗ್ಗಿ ಮಂತ್ರಿ ಮಹೋದಯನನ್ನು ರಕ್ಷಿಸುವ ಕೆಲಸ ಪ್ರಾರಂಭಿಸಿದವು. ತಮಾಷೆಯೆಂದರೆ ಮಂತ್ರಿವರ್ಯರು ಹೆದರಿ ವೇದಿಕೆಯ ಹತ್ತಿರ ಬಸ್‌ನಿಲ್ದಾಣದ ಶೌಚಾಲಯಕ್ಕೆ ನುಗ್ಗಿ ಬಾಗಿಲು ಹಾಕಿಕೊಂಡಿದ್ದರಂತೆ. ಪರಿಸ್ಥಿತಿ ತಿಳಿಯಾಗುತ್ತಿದ್ದಂತೆ ಪೋಲೀಸ್ ವ್ಯಾನಿನ ಹಿಂದಿನ ಬಾಗಿಲು ತೆರೆದು ಆ ಮಹಾಶಯರನ್ನು ಶೌಚಾಲಯದಿಂದ ಸೀದಾ ವ್ಯಾನಿಗೆ ಬರುವಂತೆ ವ್ಯವಸ್ಥೆ ಮಾಡಿ ಬಹಳ ಭದ್ರತೆಯೊಂದಿಗೆ ಜಿಲ್ಲಾ ಕೇಂದ್ರಕ್ಕೆ ಕಳುಹಿಸಿಕೊಟ್ಟರಂತೆ. ತಮ್ಮ ಕ್ಷೇತ್ರದಲ್ಲೇ ನಡೆದ ಈ ರಾಜಕೀಯ ಆಟವನ್ನು ಅವರು ಖಂಡಿತ ಊಹಿಸಿರಲಿಲ್ಲ! ವಿರೋಧ ಪಕ್ಷದ ಆಗಿನ ಶಿಸ್ತಿನ ಸಿಪಾಯಿ ರಾಜಕಾರಣದಲ್ಲಿ ಏಳು–ಬೀಳು ಕಂಡು ಈಗ ರಾಷ್ಟ್ರಮಟ್ಟದಲ್ಲಿ ಮಿಂಚುತ್ತಿದ್ದಾರೆ!

ಇಂತಹ ಅಪರೂಪದ "ಶೌಚಾಲಯ ಪ್ರಸಂಗ" ನನ್ನ ನೆನಪಿನಂಗಳದಲ್ಲಿ ಇನ್ನು ಮಾಸದೆ ಉಳಿದಿದೆ.



ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದ ಸದಸ್ಯರಿಂದ ಸ್ವಚ್ಛತಾ ಕಾರ್ಯಕ್ರಮ

# ಶ್ರೀಶಾರದಾ ವೇದಿಕೆಯ ಮಹಾಪೋಷಕರು

**ದಿ। ಅಂಬಲಪಾಡಿ ಕೃಷ್ಣ ರಾವ್, ಡಾ। ಪಿ. ವಿಠ್ಠಲ ರಾವ್ ಮಣಿಪಾಲ, ಕೆ. ರಮೇಶ ಶ್ಯಾನುಭಾಗ್ ಸತಾರ, ಟಿ. ಆರ್. ಶ್ಯಾನುಭಾಗ್ ಬೆಂಗಳೂರು, ನಳಿನಿ ಆರ್. ಶ್ಯಾನುಭಾಗ್ ಬೆಂಗಳೂರು, ದಿ। ಕುಂಜಾರು ವಿಠ್ಠಲ ರಾವ್ ಮುಂಬೈ, ಶ್ಯಾಮರಾವ್ ಆಲೆವೂರು, ವೈ. ಮುರಳೀಕೃಷ್ಣ ರಾವ್ ಉಡುಪಿ, ಸಿ. ಸರ್ವೋತ್ತಮ ರಾವ್ ಚಿಟ್ಪಾಡಿ, ಎಂ. ಸದಾನಂದ ರಾವ್ ಚಿಟ್ಪಾಡಿ, ದಿ। ಡಾ। ವೈ. ಚಂದ್ರಶೇಖರ ರಾವ್ ಕುಕ್ಕಿಕಟ್ಟೆ, ಬಿ. ಎಂ.ಸಂಜೀವ ರಾವ್ ಮಂಗಳೂರು, ಎನ್.ಡಿ. ಜಗನ್ನಾಥ ರಾವ್ ಬೆಂಗಳೂರು, ಕೆ. ಬಿ. ರವಿಶಂಕರ್ ರಾವ್ ಮಂಗಳೂರು, ಪಿ. ಆರ್. ಸದಾಶಿವ ರಾವ್ ಬೆಂಗಳೂರು, ಬೆಳ್ಮಣ್ ವಾಸುದೇವ ರಾವ್ ಉಡುಪಿ, ಕುಡುಪು ನಾರಾಯಣ ರಾವ್ ಸತಾರ, ಎ. ಕೃಷ್ಣಮೂರ್ತಿ ರಾವ್ ಆಳುಗ್ಗೇಲು, ಶ್ರೀಮತಿ ಸರೋಜಿನಿ ದೇವರಾವ್ ನಂದಿಕೂರು, ಡಾ। ಪರೀಕ ಗೋಪಾಲಕೃಷ್ಣರಾವ್ ಮಾರ್ಪಳ್ಳಿ ಉಡುಪಿ, ಕೆ. ಭಾಸ್ಕರರಾವ್ ಉಡುಪಿ, ಕೆ. ವೇಣುಗೋಪಾಲರಾವ್ ಅಂಬಲ್ಪಾಡಿ, ಬಿ. ಕೃಷ್ಣಮೂರ್ತಿರಾವ್ ಅಂಬಲ್ಪಾಡಿ, ಶ್ರೀಮತಿ ವಿಜಯಾ ಆರ್.ರಾವ್ ಮುಂಬಯಿ, ಪ್ರೊ। ತಂತ್ರಾಡಿ ನಾರಾಯಣ ಶ್ಯಾನುಭಾಗ್, ಶ್ರೀಮತಿ ಮಾಲತಿ ಶಿವರಾವ್ ಮಣಿಪಾಲ, ವೈ. ಶಂಕರನಾರಾಯಣರಾವ್ ಪಡುಬಿದ್ರಿ, ವೈ. ಮೋಹನ ರಾವ್ ಅಂಬಲಪಾಡಿ, ಬೆಳ್ಳೆ ಶ್ರೀನಿವಾಸ ರಾವ್ ಮುಂಬೈ, ಡಾ। ವೈ. ಸುದರ್ಶನ ರಾವ್ ಕುಕ್ಕಿಕಟ್ಟೆ, ಕಟ್ಟೆ ವೆಂಕಟ್ರಾವ್ ಪಲಿಮಾರು, ಮಟ್ಟು ದಿವಾಕರ ರಾವ್ ಮುಂಬಯಿ, ಕೆ.ಉಮೇಶ್ ರಾವ್ ಕುಡಾಲ್, ಕೆ.ವೆಂಕಟರಮಣರಾವ್ ಕುಡಾಲ್, ಕಡಂದಲೆ ಶ್ರೀಪತಿ ರಾವ್ ಅಧಿಕಾರಿ ಮುಂಬೈ, ಅಂಬಲ್ಪಾಡಿ ರಾಘವೇಂದ್ರ ರಾವ್ ಬೆಂಗಳೂರು, ಅದ್ಯಪಾಡಿ ವಸಂತ ಕುಮಾರ್, ಎಸ್.ಉಮೇಶ್ ರಾವ್ ಮಾಣಿಬೆಟ್ಟು, ಶ್ರೀಮತಿ ಸವಿತಾ ಮೋಹನ್ ರಾವ್ ಕಬ್ಯಾಡಿ, ಪ್ರಫುಲ್ಲಚಂದ್ರ ರಾವ್ ಉಡುಪಿ, ಕೃಷ್ಣಕುಮಾರ್ ರಾವ್ ಮಟ್ಟು, ಚಿಟ್ಪಾಡಿ ಭುಜಂಗರಾವ್, ಕೋಲ್ಪೆ ಗೋಪಾಲಕೃಷ್ಣರಾವ್, ಯು.ಅರವಿಂದ ಕುಮಾರ್ ಮಣಿಪಾಲ, ಕಿಶೋರ್ ಭಾಸ್ಕರ್ ರಾವ್ ಮುಂಬಯಿ, ವೈ.ವಿಠಲರಾವ್ ಚಿಟ್ಪಾಡಿ, ಶ್ರೀ ಪ್ರವೀಣ್ ಕುಮಾರ್ ಬೆಳ್ಳೆ, ಡಾ। ಲೋಕೇಶ್ ರಾವ್ ಬಿ.ಕೆ., ಶ್ರೀ ಕುಂಜಾರು ನಿರಂಜನ ರಾವ್, ಡಾ। ಸತ್ಯನಾರಾಯಣ ಶಿವಮೊಗ್ಗ, ಶ್ರೀ ಎಲ್ಲೂರು ಉಮೇಶ ರಾವ್, ಶ್ರೀ ಕೆ.ಅನಂತರಾಮ ಶಾಸ್ತ್ರಿ ಪಡುಬಿದ್ರಿ, ಶ್ರೀ ಬಿ. ಆನಂದ ರಾವ್ ಲಾತೂರು, ಶ್ರೀ ಬಿ. ಜಯರಾಮ ರಾವ್ ಉಡುಪಿ, ಶ್ರೀ ಮರೂರು ನಾರಾಯಣ ಹೆಬ್ಬಾರ್ ಉಡುಪಿ, ಶ್ರೀ ನಂದಳಿಕ ಕೃಷ್ಣರಾವ್ ದೊಡ್ಡಣಗುಡ್ಡೆ, ಶ್ರೀ ಅಶೋಕ್ ತಂತ್ರಾಡಿ ಬೆಂಗಳೂರು, ಶ್ರೀಮತಿ ದೀಪಾಲಿ ಅಶೋಕ್ ಬೆಂಗಳೂರು, ಶ್ರೀ ತಂತ್ರಾಡಿ ಶಿವರಾಮ ಶ್ಯಾನುಭಾಗ್**


ಶುಭಾಶಯಗಳೊಂದಿಗೆ

**ಹೆಬ್ಬಾರ್ ಎಂಟರ್‌ಪ್ರೈಸಸ್**

ವೈಷ್ಣವಿ ಬಿಲ್ಡಿಂಗ್, ವಾದಿರಾಜ ರಸ್ತೆ, ಉಡುಪಿ–576101.

ನಮ್ಮಲ್ಲಿ ಶುಭ ಸಮಾರಂಭಗಳಿಗೆ ಬೇಕಾಗುವ ಶಾಮಿಯಾನ, ಕುರ್ಚಿ, ಟೇಬಲ್, ಪಾತ್ರೆ, ಅಡುಗೆ ಹಾಗೂ ಕ್ಯಾಟರಿಂಗ್ ವ್ಯವಸ್ಥೆ ಲಭ್ಯವಿದೆ.

ಪ್ರೊ : ಮಂಜುನಾಥ ಹೆಬ್ಬಾರ್ ಸಂಪರ್ಕ ಸಂಖ್ಯೆ 9611099894





ಎಮ್. ದೇವಾನಂದ್ ಭಟ್ Cell : 9845644556 9483913344



ಶೋಭಾ ಡಿಜಿಟಲ್

ಸ್ಟುಡಿಯೋ & ವೀಡಿಯೊ

ಬೆಳ್ವಾಯಿ–574213 (08258)-276177 (O)

ಮೂಡಬಿದ್ರಿ, ಲಾವಂತ ಕಾಂಪ್ಲೆಕ್ಸ್ 9901995655

ಎಡಪದವು – 574 164 (0824)-2256374 (O) ಮಂಗಳೂರು, ದ.ಕ.

ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು

## ಶುಭವಿವಾಹ

ಶ್ರೀ ಎರ್ಮಾಳು ಕುಮಾರಸ್ವಾಮಿ ಮತ್ತು ಶ್ರೀಮತಿ ಭಾಗೀರಥಿರವರ ಪುತ್ರ **ಡಾ। ಗುರುಪ್ರಸಾದ್** ಹಾಗೂ ಕಡಬ ಕುಂಭಾಟ್ ಶ್ರೀ ಪ್ರಕಾಶ್ ರಾವ್ ಮತ್ತು ಶ್ರೀಮತಿ ಕೆ. ರಾಜೇಶ್ವರಿರವರ ಪುತ್ರಿ **ಡಾ। ಭಾಗ್ಯಶ್ರೀ** ಇವರ ವಿವಾಹವು ತಾ.12–11–2017ರಂದು ಬೆಂಗಳೂರು ಕೋಡಿಗೆಹಳ್ಳಿಯ ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ದೇವರ ಸನ್ನಿಧಿಯಲ್ಲಿ ನೆರವೇರಿತು.

**** ****

ದಿ। ಶ್ರೀಮತಿ ವೀಣಾ ಮತ್ತು ಅಲೆವೂರು ಬಾಲಕೃಷ್ಣ ಭಟ್ಟರ ಪುತ್ರ **ಶ್ಯಾಮಸುಂದರ** ಹಾಗೂ ಕಣಕ ಶ್ರೀಮತಿ ಶ್ರೀಮತಿ ಮತ್ತು ಶ್ರೀ ರಾಮಕೃಷ್ಣ ಗಣಪತಿ ಭಟ್ಟರ ಪುತ್ರಿ **ಶೀಲಾವತಿ** ಇವರ ವಿವಾಹವು ತಾ.13–11–2017ರಂದು ಕುಮಟಾದ ಮಹಾವಿಷ್ಣು ದೇವಸ್ಥಾನದಲ್ಲಿ ನೆರವೇರಿತು.

**** ****

ಬಾರಕೂರು ಶ್ರೀ ವಸಂತ ಪಿ.ರಾವ್ ಮತ್ತು ಶ್ರೀಮತಿ ಶಾಂತಾರವರ ಪುತ್ರ **ಸುಮಂತ್ ಕುಮಾರ್** ಹಾಗೂ ಕೊಪ್ಪ ಶ್ರೀ ಗಣೇಶಯ್ಯ ಮತ್ತು ಶ್ರೀಮತಿ ಲಕ್ಷ್ಮೀರವರ ಪುತ್ರಿ **ಅಕ್ಷತಾ** ಇವರ ವಿವಾಹವು ಕುಕ್ಕಿಕಟ್ಟೆಯ ಮುಚ್ಲುಕೋಡು ಶ್ರೀ ಸುಬ್ರಹ್ಮಣ್ಯ ಸಭಾಂಗಣ ದಲ್ಲಿ ತಾ.29–11–2017ರಂದು ನೆರವೇರಿತು.

**** ****

ಕುಂದಾಪುರ ರಟ್ಟಾಡಿಯ ಶ್ರೀಮತಿ ಸೀತಮ್ಮ ಮತ್ತು ವೆಂಕಟೇಶ ಹೆಬ್ಬಾರರ ಪುತ್ರ **ವಿಜಯೇಂದ್ರ** ಹಾಗೂ ಸಿದ್ದಾಪುರ ಮಾವಿನಗುಂಡಿಯ ದಿ। ಗಣಪತಯ್ಯನವರ ಪುತ್ರಿ **ನೇತ್ರಾವತಿ** ಇವರ ವಿವಾಹವು ಹೆಬ್ರಿ ಶ್ರೀ ಅನಂತಪದ್ಮನಾಭ ಸನ್ನಿಧಿಯಲ್ಲಿ ತಾ.29–11–2017ರಂದು ಜರಗಿತು.

**** ****

ಪಡುಬಿದ್ರಿ ಶ್ರೀ ಶಿವಪ್ರಸಾದ ಹಾಗೂ ಶ್ರೀಮತಿ ಗೀತಾರವರ ಪುತ್ರಿ **ಅಕ್ಷತಾ** ಹಾಗೂ ಶ್ರೀ ಶ್ರೀಕಂಠ ಮೇರ್ಟ ಮತ್ತು ಶ್ರೀಮತಿ ಭಾಗ್ಯಲಕ್ಷ್ಮೀರವರ ಪುತ್ರ **ಶ್ರೀಚರಣ್** ಇವರ ವಿವಾಹವು ತಾ.30–11–2017ರಂದು ಉಡುಪಿ ಕುಂಜಿಬೆಟ್ಟಿನ ಶ್ರೀ ಶಾರದಾ ಮಂಟಪದಲ್ಲಿ ನೆರವೇರಿತು.

**** ****

ಪಡುಬೆಳ್ಳೆ ಶ್ರೀಮತಿ ಗಾಯತ್ರಿ ಮತ್ತು ಶ್ರೀ ರತ್ನಾಕರ ರಾಯರ ಪುತ್ರ **ಆಶಿತ್** ಹಾಗೂ ನೆಲ್ಲಿಗುಡ್ಡೆ ಶ್ರೀಮತಿ ಆಶಾ ಮತ್ತು ಶ್ರೀ ಚಂದ್ರಶೇಖರ ರಾಯರ ಪುತ್ರಿ **ಅಶ್ವಿನಿ** ಇವರ ವಿವಾಹವು ಮೈಸೂರು ಸರಸ್ವತಿಪುರಂನ ಶ್ರೀಕೃಷ್ಣ ಸಭಾಭವನದಲ್ಲಿ ತಾ.03–12–2017ರಂದು ನೆರವೇರಿತು.

ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನ ಹಾಗೂ ವೈಯಕ್ತಿಕ ಜಾಹೀರಾತುಗಳಲ್ಲಿ ಅಭಿವ್ಯಕ್ತವಾಗುವ ಅಭಿಪ್ರಾಯಗಳು, ಅನಿಸಿಕೆಗಳು ಲೇಖಕರ ಹಾಗೂ ಜಾಹೀರಾತುದಾರರ ಸ್ವಂತ ಅಭಿಪ್ರಾಯಗಳೇ ಹೊರತು ಅವು ಪತ್ರಿಕೆಯ ಸಂಪಾದಕರ ಅಥವಾ ಪ್ರಕಾಶಕರ ಅಭಿಪ್ರಾಯ ವಾಗಿರಬೇಕಾಗಿಲ್ಲ. ಲೇಖನಗಳನ್ನು, ಸುದ್ದಿಗಳನ್ನು ಮತ್ತು ಜಾಹೀರಾತುಗಳನ್ನು ಪತ್ರಿಕೆಯ ಮೂಲ ಚಿಂತನೆಗೆ ಅನುಗುಣವಾಗಿ ಸೂಕ್ತ ಮಾರ್ಪಾಡು ಮಾಡಿಕೊಳ್ಳುವ ಅಧಿಕಾರ ಸಂಪಾದಕ ಮಂಡಳಿಗಿದೆ. –ಸಂಪಾದಕ ಮಂಡಳಿ

## ಶ್ರೀ ಶಾರದಾ ದೇವಸ್ಥಾನ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ

**ಈ ತಿಂಗಳ ಕಾರ್ಯಕ್ರಮಗಳು**

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 3-30ರಿಂದ 8-00)**

ಮಂಗಳಾರತಿ : ಪ್ರತಿ ದಿನ ಬೆಳಿಗ್ಗೆ 8–00, ಮಧ್ಯಾಹ್ನ 12–00 ಹಾಗೂ ರಾತ್ರಿ 7–30ಕ್ಕೆ

ಪ್ರತಿ ಮಂಗಳವಾರ: ಸೌಂದರ್ಯಲಹರಿ ಪಾರಾಯಣ ಸಂಜೆ 5ರಿಂದ } ಮಹಿಳಾ ವೇದಿಕೆಯಿಂದ

ಪ್ರತಿ ಶುಕ್ರವಾರ : ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ ಸಂಜೆ 5ರಿಂದ

ಪ್ರತಿ ಆದಿತ್ಯವಾರ : ಸ್ವಾಧ್ಯಾಯ ಸಮಿತಿಯವರಿಂದ ''ಪಾರಾಯಣ'' ಸಂಜೆ ಗಂಟೆ 4–30ರಿಂದ

**ತಾ.05-01-2018 ಸಂಕಷ್ಟಹರ ಚತುರ್ಥಿಯಂದು ''ಸಾಮೂಹಿಕ ಗಣಹೋಮ'' ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.51/-)**

**ತಾ.14-01-2018 ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ (ಸಮಯ ಸಂಜೆ 5-00ರಿಂದ 6-00ರ ವರೆಗೆ)**

**ತಾ.23-12-2017 ಮತ್ತು ತಾ.06-01-2018 ಪಂಚಮಿಯಂದು ''ನಾಗದೇವರಿಗೆ ತನುಸೇವೆ'' ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ**

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**

## ಭೀಮರಥಿ ಶಾಂತಿ



ಶ್ರೀ ಅಲೆವೂರು ಪ್ರಭಾಕರ ರಾಯರು ತಮಗೆ ಎಪ್ಪತ್ತು ಸಂವತ್ಸರಗಳು ತುಂಬಿದ ಪ್ರಯುಕ್ತ ಭೀಮರಥೀ ಶಾಂತಿಯನ್ನು ಪತ್ನಿ ಶ್ರೀಮತಿ ವಿನುತಾ ಹಾಗೂ ಮಕ್ಕಳು, ಸಹೋದರ, ಸಹೋದರಿಯರೊಂದಿಗೆ ತಾ.26–11–2017ರಂದು ಚಿಟ್ಪಾಡಿಯ ಶ್ರೀ ಶಾರದಾಂಬ ದೇವಸ್ಥಾನದಲ್ಲಿ ಆಚರಿಸಿದರು.

## ನಿಧನ



ಉಡುಪಿಯ ಖ್ಯಾತ ಲೆಕ್ಕ ಪರಿಶೋಧಕ ರಾದ ಶ್ರೀ ಗಣೇಶ ಹೆಬ್ಬಾರ್‌ರವರ ತೀರ್ಥರೂಪ ರಾದ ಶ್ರೀ ರಂಗಯ್ಯ ಹೆಬ್ಬಾರ್‌ರವರು ತಾ.10.11.2017ರಂದು ಅಂಬಲ್ಪಾಡಿಯಲ್ಲಿ ನಿಧನ ಹೊಂದಿದರು.

## ವಿಳಾಸ ಬದಲಾವಣೆ

ಮುಂಬಯಿಯ ಅಂಧೇರಿಯಲ್ಲಿ ವಾಸವಾಗಿದ್ದ ಶ್ರೀ ಸಂಜಯ್ ಹೆಚ್.ರಾವ್ ಇವರು
**ಬಿ–1004, ಬ್ಲೂ ಫಾರ್ಚೂನಾ,**
**ಮರೋಲ್ ಮಿಲಿಟರಿ ರೋಡ್,**
**ಮರೋಲ್, ಅಂಧೇರಿ ಪೂರ್ವ,**
**ಮುಂಬಯಿ 400059**
ಇಲ್ಲಿಗೆ ತಮ್ಮ ನಿವಾಸ ಬದಲಾಯಿಸಿದ್ದಾರೆ.

## ಶುಭ ಜನನ

ಶ್ರೀಮತಿ ನೂತನ ಮತ್ತು ಕೊಕ್ರಾಡಿ ಸಂತೋಷ್ ದಂಪತಿಗಳಿಗೆ 26–11–2017 ರಂದು ಹೆಣ್ಣು ಮಗುವಿಗೆ ಜನನ.

## ಧನುರ್ಮಾಸದ ವಿಶೇಷ ದಿನಗಳು

| | | | |
|---|---|---|---|
| 15–12–2017 | ಧನು: ಸಂಕ್ರಮಣ | 12–01–2018 | ಸರ್ವೈಕಾದಶಿ |
| 18–12–2017 | ಎಳ್ಳಮಾವಾಸ್ಯೆ | 14–01–2018 | ಮಕರ ಸಂಕ್ರಮಣ |
| 19–12–2017 | ಪೌಷ ಮಾಸ ಶುಕ್ಲಪಕ್ಷಾರಂಭ | 15–01–2018 | ಉತ್ತರಾಯಣ ಪುಣ್ಯಕಾಲ, ಉಡುಪಿ ಚೂರ್ಣೋತ್ಸವ |
| 29–12–2017 | ಸರ್ವೈಕಾದಶಿ | 16–01–2018 | ಅಮಾವಾಸ್ಯೆ |
| 02–01–2018 | ಹುಣ್ಣಿಮೆ, ಕೃಷ್ಣಪಕ್ಷಾರಂಭ | 17–01–2018 | ಮಾಘ ಮಾಸ ಶುಕ್ಲಪಕ್ಷಾರಂಭ |
| 05–01–2018 | ಸಂಕಷ್ಟಹರ ಚತುರ್ಥೀ ಚಂದ್ರೋದಯ ರಾತ್ರಿ 9–49ಕ್ಕೆ | 18–01–2018 | ಉಡುಪಿ ಶ್ರೀ ಪಲಿಮಾರು ಮಠ ಪರ್ಯಾಯೋತ್ಸವ |

॥ ಶ್ರೀ ಚಂಡಿಕಾದುರ್ಗಾಯೈ ನಮಃ ॥

ಆತ್ಮೀಯರೇ,

ಸ್ವಸ್ತಿ ಶ್ರೀ ಹೇಮಲಂಬಿ ನಾಮ ಸಂವರದ ಮಾಘ ಮಾಸ ಶುದ್ಧ ಳಿಯು ತಾ.21–01–2018ನೇ ಆದಿತ್ಯವಾರದಂದು ಚೌಳಿಕೆರೆಯ ನಮ್ಮ ಗೃಹ "ಶ್ರೀ ಮಾತಾ"ದಲ್ಲಿ

**ಶತ ಚಂಡಿಕಾಯಾಗದ ಪೂರ್ಣಾಹುತಿ**

ಕಾರ್ಯಕ್ರಮವನ್ನು ನೆರವೇರಿಸುವುದೆಂದು ನಾವು ನಿಶ್ಚಯಿಸಿರುವ ಪ್ರಯುಕ್ತ ತಾವುಗಳು ಸಕುಟುಂಬಿಕರಾಗಿ ಆಗಮಿಸಿ, ನಮ್ಮ ಯಥೋಚಿತ ಸತ್ಕಾರವನ್ನು ಸ್ವೀಕರಿಸಿ, ನಮ್ಮನ್ನು ಹರಸಿ, ಶ್ರೀ ದೇವಿಯ ಕೃಪೆಗೆ ಸತ್ಪಾತ್ರರಾಗಬೇಕಾಗಿ ನಮ್ಮ ಕೋರಿಕೆ.

ತಮ್ಮ ಆಗಮನಾಭಿಲಾಷಿಗಳು

ಲೀಲಾವತಿಯಮ್ಮ ಮತ್ತು ಮಕ್ಕಳು.

**ಶ್ರೀಮತಿ ಶುಭಾ ಹೆಬ್ಬಾರ್ ಮತ್ತು ಶ್ರೀ ರಾಘವೇಂದ್ರ ಭಟ್, ನಾಗಪಾತ್ರಿಗಳು ಮತ್ತು ಜ್ಯೋತಿಷ್ಯರು, ಚೌಳಿಕೆರೆ, ಬಾರಕೂರ.**

*With Best Complimemts From*

SRI M. SHAILESH RAO Ph : 9448624324
B.E., Civil

Civil Engineer & Contractor
**SRI MALAVIKA ASSOCIATES**
KALSANKA-UDUPI ROAD, UDUPI.
Website : shreemaalavikaassociates.com

**ದೇವಿಕೃಪಾ ಏಜೆನ್ಸೀಸ್, ನಂದಿಕೂರು**
ಫೋನ್ : 2556536 (R), 2555466 (O), Mobile : 9845149521



ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.

ಪ್ರೊ। ಎಸ್. ಜನಾರ್ದನ್ ರಾವ್
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು

ಶ್ರೀಮತಿ ಮತ್ತು ಶ್ರೀ ಉದಯಚಂದ್ರ ರಾವ್ ನಂದಳಿಕೆ
**ಯೆಶಸ್ವೀ ಎಂಟರ್‌ಪ್ರೈಸೆಸ್**
ಶಾಂಭವಿ ಹೈಟ್ಸ್, ಸೈಂಟ್‌ಮೇರಿಸ್ ಕಾಲೇಜು ಎದುರು, ಮುಖ್ಯರಸ್ತೆ, ಶಿರ್ವ - 574 116.
ಇ-ಮೇಲ್ : udayarao42@gmail.com

Z Gift Item Z Stationary Z Xerox Z Lamination
Z Spiral Binding Z Mobile & DTC Recharge Z Tours & Travels
Z Courier Service Z Sports Items & Toys Z Ice Creams

SAMPATH KUMAR Mobile : 9741508881
**TRISHULINI TOURIST**
*The Tourist People*
Near Mahishamardhini Temple, Bailur, Udupi.
ALL TYPES OF VEHICLES AVAILABLE FOR HIRE

# ಸ್ವಾಭಿಮಾನಿಗಳಾಗಲು ಸಂಘಟಿತರಾಗೋಣ

ಈ ಸಮಾಜದಲ್ಲಿ ಆದಿಯಿಂದಲೂ ಜಾತಿ–ವರ್ಗ, ಮೇಲು–ಕೀಳುಗಳನ್ನು ಹುಟ್ಟುಹಾಕಿದವರು ನಾವೇ (ಮನುಷ್ಯ ಜಾತಿ). ಆ ಪಿಡುಗು ಇನ್ನೂ ಮಾಸಿಲ್ಲ. 21ನೇ ಶತಮಾನದಲ್ಲಿರುವ ನಾವು, ಮಾತಿಗೆ ನಾವೆಲ್ಲಾ ಒಂದೇ ಎಂದು ಬೊಬ್ಬೆ ಹೊಡೆದರೂ ಕಾರ್ಯಕ್ಕಾಗುವಾಗ ಇಂದಿಗೂ ಮತಬೇಧ ಪಂಕ್ತಿಬೇಧಗಳನ್ನು ಕಲ್ಪಿಸುವವರು ನಮ್ಮೆದುರು ಇದ್ದಾರೆ ಎಂಬುದಕ್ಕೆ ಮೊನ್ನೆ ಪುತ್ತೂರು ತಾಲೂಕಿನ ಬಡಗನ್ನೂರು ಗ್ರಾಮದ ದಿ| ರಾಮಕೃಷ್ಣಯ್ಯ ರತ್ನಾವತಿಯವರ ಸುಪುತ್ರ ಉದಯ ಕುಮಾರ್ ಪಡುಮಲೆಯವರಿಗಾದ ಒಂದು ಅವಮಾನದ ಪ್ರಕರಣ ಸಾಕ್ಷಿಯಾಗಿ ನಿಂತಿದೆ.

ಶ್ರೀ ಬಾಲಕೃಷ್ಣ ರಾಯರ ಮುಂದಾಳತ್ವದಲ್ಲಿ ಅಡುಗೆ ಸಹಾಯಕರಾಗಿಯೋ, ಬಡಿಸುವವರ ಬಳಗದಲ್ಲೋ ತನ್ನ ಹೊಟ್ಟೆಪಾಡಿಗೆ ದುಡಿಯುವ ಉದಯ ಕುಮಾರ್ ರಾವ್ ಅವರು ಎಂದಿನಂತೆ ಪಟ್ಲಡ್ಕದ ಒಂದು ಮನೆ ಒಕ್ಕಲಿನ ಮುನ್ನಾ ದಿನ ತೆರಳಿ ತರಕಾರಿ ಹಚ್ಚುವ ಕೆಲಸದಲ್ಲಿ ನಿರತರಾದಾಗ ತನ್ನ ಪರಿವಾರದೊಂದಿಗೆ ಅಲ್ಲಿಗೆ ಆಗಮಿಸಿದ ಕಾವು ಪಂಚಲಿಂಗೇಶ್ವರ ದೇವಸ್ಥಾನದ ಅರ್ಚಕರಾದ ಶಿವಪ್ರಸಾದ್ ಕಡಮಣ್ಣಾಯ ಅಡುಗೆ ಮನೆ ಪ್ರವೇಶಿಸಿ ಬಂದವರೇ ನಮ್ಮ ಸಮಾಜದ ಉದಯ ಕುಮಾರ್‌ರವರನ್ನು ಉದ್ದೇಶಿಸಿ 'ನೀನು ಮುಟ್ಟಿದ್ದು ನಮಗಾಗುವುದಿಲ್ಲ, ನೀನು ಅನ್ನಬಡಿಸಕೂಡದು, ನೀನು ಸ್ಥಾನಿಕ' ಅಲ್ಲಿದ್ದವರಲ್ಲಿ ಹೊರಗೆ ಕಳುಹಿಸಿ ಎಂದು ನಮ್ಮವರನ್ನು ಹೊರಹಾಕಿದ್ದರು. ಅದರರ್ಥ ಕಡಮಣ್ಣಾಯರು ಇನ್ನೂ 16ನೇ ಶತಮಾನದಲ್ಲಿ ಇದ್ದಾರೆಯೇ? ಇದನ್ನು ಸಹಿಸಲಾರದೆ ನಮ್ಮ ಸ್ಥಾನಿಕ ಬ್ರಾಹ್ಮಣ ಮಹಾಮಂಡಲದ ಅಧ್ಯಕ್ಷರಾದ ಪುತ್ತೂರಿನ ಎನ್.ಕೆ. ಜಗನ್ನಿವಾಸರಾಯರ ಆದೇಶದಂತೆ ಪುತ್ತೂರು ಪೋಲಿಸ್ ಸ್ಟೇಷನ್‌ನಲ್ಲಿ ದೂರುಕೊಟ್ಟು ಅರ್ಚಕರನ್ನು ಬರಹೇಳಿ ಕ್ಷಮೆ ಕೇಳಿಸಿದ್ದು ಮತ್ತು ಅವರಿಂದ ಮುಚ್ಚಳಿಕೆ ಬರೆಸಿಕೊಂಡದ್ದು ಆಯಿತು. ಈ ವಿಷಯದ ಬಗ್ಗೆ ಕಾವು ದೇವಸ್ಥಾನದ ಆಡಳಿತ ಮಂಡಳಿ ಅಧ್ಯಕ್ಷರಾದ ಶ್ರೀ ದಿವ್ಯಾನಾಥ್ ಶೆಟ್ಟಿಯವರ ಗಮನಕ್ಕೂ ತಂದು ನಿಮ್ಮ ಸಹಾಯಕ್ಕೆ ನಾನು ಕೂಡ ಇದ್ದೇನೆ ಎಂದು ಅಶ್ವಾಸನೆ ನೀಡಿದಲ್ಲಿಗೆ ಒಂದು ಪ್ರಕರಣ ಮೊನ್ನೆಮೊನ್ನೆ ಮುಕ್ತಾಯಗೊಂಡಿತು. ಇಂತಹ ಅನೇಕ ಪ್ರಕರಣಗಳನ್ನು ನಮ್ಮ ಸ್ಥಾನಿಕ ಸಮಾಜ ಇನ್ನೂ ಅನುಭವಿಸುತ್ತಲೇ ಇದೆ. ಕಳೆದ ವರುಷ ಪುತ್ತೂರು ದೇವಸ್ಥಾನದಲ್ಲಿ ರುದ್ರಪಠಿಸಲು ಕುಳಿತ ನಾಲ್ವರು ನಮ್ಮವರನ್ನು (ಅಶೋಕ್ ರಾವ್, ಮುರಲೀಧರ, ಪ್ರಸನ್ನ, ಕಿಶೋರ್) ಎಬ್ಬಿಸಿ ಆಚೆಗೆ ಕಳುಹಿದ ಪ್ರಕರಣ, ಆ ಬಳಿಕ ರಾಜಿಪಂಚಾತಿಗೆ, ಕ್ಷಮಾಯಾಚನೆ ನಡೆದಿರುವುದು ನಮಗೆ ತಿಳಿದ ವಿಷಯ. ಇದಕ್ಕಿಂತಲೂ ಮೊದಲು ಈಶ್ವರಮಂಗಲ ಪಂಚಲಿಂಗೇಶ್ವರ ದೇವಸ್ಥಾನದ ಬ್ರಹ್ಮಕಲಶದ ಸಂದರ್ಭ ನನ್ನ ಅಚ್ಚುತ ಮೂಡಿತ್ತಾಯ ಹಾಗೂ ಕುಂಟಾರು ರವೀಶ ತಂತ್ರಿಯವರು ನಮ್ಮವರಾದ ಸುಬ್ರಹ್ಮಣ್ಯ ರಾವ್ ಅವರೊಂದಿಗೆ ನಡೆದ ವೈಮನಸಿನ ಪ್ರಕರಣ, ಪಂಕ್ತಿ ಬೇಧಗಳು ಇವೆಲ್ಲ ನಮ್ಮ ಸ್ಥಾನಿಕ ಸಮಾಜದ ಮೇಲೆ ಆಗುವ ಗಧಾಪ್ರಹಾರಗಳು. ಇದನ್ನು ಅನುಭವಿಸಿದ ವನಿಗೆ ಗೊತ್ತು ಇದರ ನೋವು, ಇಂತಹ ಅನೇಕ ಪ್ರಕರಣಗಳಲ್ಲಿ ನಮ್ಮ ಸಮಾಜದ ಸಂಘಸಂಸ್ಥೆಗಳು ಎಷ್ಟು ಮುಂದೊತ್ತಿ ಹೋಗಿ ಇದನ್ನು ಇಲ್ಲವಾಗಿಸುವುದಕ್ಕೆ ಮುಂದಾಗಿದೆ? ಮೊನ್ನೆ ನಡೆದ ಪ್ರಕರಣದಲ್ಲೂ ಉದಯ ಕುಮಾರ್‌ರವರ ಹಿಂದೆ ನಮ್ಮವರು ನಾಲ್ಕು ಜನ ಇರುತ್ತಿದ್ದರೆ ಅಥವಾ ನಮ್ಮ ಸ್ಥಾನಿಕ ಮಹಾಮಂಡಲಕ್ಕೊಂದು ಪತ್ರಮುಖೇನ ಅವರಿಗಾದ ತೊಂದರೆಯನ್ನು ತೋಡಿಕೊಳ್ಳುತ್ತಿದ್ದರೆ ತಕ್ಷಣ ನಮ್ಮ ಸಮಾಜದ ಎಲ್ಲ ಸಂಘಗಳು ಒಟ್ಟು ಸೇರಿ ಅದಕ್ಕೆ ಬೇಕಾದ ವ್ಯವಸ್ಥೆಗೆ ಮುಂದಾಗಬಹುದಿತ್ತು.

ಇತ್ತೀಚಿಗೆ ಮಾನ್ಯ ಸಚಿವರಾದ ರಮಾನಾಥ ರೈಗಳೇ ನಮ್ಮ ಸಮಾಜದ ಪ್ರತಿಷ್ಠಿತ ವ್ಯಕ್ತಿ, ವಕೀಲರೂ, ಕರ್ನಾಟಕ ರಾಜ್ಯ ಧಾರ್ಮಿಕ ಪರಿಷತ್ ಸದಸ್ಯರಾದ ಪುತ್ತೂರಿನ ಎನ್.ಕೆ. ಜಗನ್ನಿವಾಸರಾಯರಲ್ಲಿ ಕೇಳಿದಂತೆ "ನಿಕುಲು ಬ್ರಾಣೆರ್ ಅತ್‌ಗೆ ಅತ್ತ್" ಎಂದಾಗ ಅದಕ್ಕೆ ಬೇಕಾದ ಸಾಕ್ಷಾಧಾರ ಸಹಿತ ದಾಖಲೆ ಒದಗಿಸಿದಾಗ ಸಚಿವರೇ ಆಶ್ಚರ್ಯಪಟ್ಟ ವಿಷಯವನ್ನು ಮಾನ್ಯ ಜಗನ್ನಿವಾಸರಾಯರು ಉಲ್ಲೇಖಿಸುತ್ತಾರೆ. ಇಂತಹ ಅನೇಕ ಸಂದರ್ಭಗಳನ್ನು ಎದುರಿಸಿದ ಉದಾಹರಣೆ ಸಹಿತವಾಗಿ ನಮ್ಮ ಮಹಾಮಂಡಲದ ಅಧ್ಯಕ್ಷರಾದ ಜಗನ್ನಿವಾಸರಾಯರು ವಿಶ್ಲೇಷಿಸುತ್ತಾರೆ. ಅದಕ್ಕೆ ಸರಿಯಾದ ಉತ್ತರವನ್ನು ಕೂಡ ನೀಡುತ್ತಾ ಬಂದಿದ್ದಾರೆ. ಅವರೇ ಎಂದಂತೆ ಬ್ರಾಹ್ಮಣರು ನಾವೆಲ್ಲಾ ಒಂದೇ ಎಂದು ಒಂದು ಕಡೆ ಹೇಳುತ್ತ, ಇನ್ನೊಂದು ಬದಿಯಿಂದ ಪಂಕ್ತಿ ಬೇದ ಮಾಡುತ್ತಾ ಬರುವುದು ಎಷ್ಟು ಸರಿ? ಆದ್ದರಿಂದ ನನ್ನ ಅನಿಸಿಕೆ ಏನೆಂದರೆ ನಾವು ಹೊರಗಿನ ಸವಾಲುಗಳಿಗಿಂತ ನಮ್ಮೊಳಗಿನ ದುರ್ಬಲತೆಯಿಂದಲೇ ಸೋಲುವುದು ಹೆಚ್ಚು. ನಾವು ಮೂಲ ಬ್ರಾಹ್ಮಣರು ಎಂಬುದನ್ನು ಹೇಳಿಕೆಯಿಂದ ಮಾತ್ರ ಗಟ್ಟಿಗೊಳಿಸುವುದಲ್ಲ ಸಮಾಜದಲ್ಲಿ ನಮ್ಮ ಶಕ್ತಿ ಕೂಡ ಪ್ರದರ್ಶನಗೊಂಡಾಗ ಇತರರು ನಮಗೆ ಮನ್ನಣೆ ಕೊಡುವಂತಾಗುತ್ತದೆ. ಅನ್ನ ಬಡಿಸ ಹೊರಟ ನಮ್ಮ ವ್ಯಕ್ತಿಗೆ ಆದ ಅವಮಾನಕ್ಕೆ ನಾವೆಲ್ಲ ಒಂದಾಗಿ ಸಾಂತ್ವನ ಹೇಳ ಹೊರಟರೆ ಅವರಿಗೂ ನಮ್ಮ ಹಿಂದೆ ಜನ ನಮ್ಮವರು ಇದ್ದಾರೆ ಎಂಬ ಭರವಸೆ ಬಂದು ಇಂತಹ ತೊಂದರೆ ಹೇಗೆ ಎದುರಿಸಬಹುದು ಎಂಬುದರ ಬಗ್ಗೆ ದೃಢತೆ ಹೆಚ್ಚುತ್ತದೆ, ನಮಗೆ ಯಾಕೆ ಎಂದು ಎಲ್ಲರೂ ಕೈಕಟ್ಟುವವರೇ ಆದರೆ ಇಂತಹ ಪ್ರಕರಣಗಳು ಹೆಚ್ಚಿ ನಮ್ಮ ದುರ್ಬಲತೆಯನ್ನೇ ಅಸ್ತ್ರವಾಗಿಸಿಕೊಂಡು ಇತರರಿಗೆ ಸವಾರಿಮಾಡುವುದಕ್ಕೆ ಅವಕಾಶ ನೀಡಿದ ಹಾಗೇ ಆಗುವುದು ಖಂಡಿತ. ಅನೇಕ ಕಡೆಗಳಲ್ಲಿ ಶಿವಳ್ಳಿ–ಶಿವಬ್ರಾಹ್ಮಣರು ಒಂದಾಗಿ ಇರುವುದನ್ನು ಮತ್ತು ಅನ್ಯೋನ್ಯತೆಯಿಂದ ಮತ್ತು ಸಹಬಾಳ್ವೆ ಸಹಪಂಕ್ತಿಗಳಲ್ಲಿ ತೊಡಗಿಸಿಕೊಂಡಿರುವುದನ್ನು ಕೂಡ ನಾವು ಇತ್ತೀಚಿನ ದಿನಗಳಲ್ಲಿ ನೋಡಿದ್ದೇವೆ. ಆದರೂ ಇಂತಹ ಪ್ರಕರಣ ಕೆಲವು ಕಡೆಗಳಲ್ಲಿ ಮತಾಂಧತೆ–ಮಧಾಂದತೆಯಿಂದ ಕೂಡಿದ ವ್ಯಕ್ತಿಗಳಿಂದ ಇನ್ನೂ ನಡೆಯುತ್ತಲೇ ಇದೆ. ಅವರನ್ನು ಸರಿದಾರಿಗೆ ತರುವರೇ ನಾವು ಸಂಘಟಿತರಾಗಬೇಕು. ಈ ಪ್ರಕರಣದಲ್ಲಿ ನಮ್ಮ ಸಮಾಜದ ಅನೇಕ ಸಂಘಸಂಸ್ಥೆಗಳು ನಾವಿದ್ದೇವೆ ನಮ್ಮಿಂದ ಏನಾಗಬೇಕು ಎಂದು ಫೋನ್ ಕರೆಯ ಮೂಲಕ ಅನೇಕರು ಕೇಳಿದ್ದಾರೆ. ಮುಂದೆ ಇಂತಹ ಪ್ರಕರಣ ಮುಂದಾದಾಗ ನಾವೆಲ್ಲ ಎಚ್ಚೆತ್ತುಕೊಳ್ಳಲೇ ಬೇಕು. ಇಂತಹಾ ಅನ್ಯಾಯ ಅವಮಾನ ಗಳನ್ನು ಸಹಿಸಿಕೊಂಡಿರಬೇಕಾದ ಅಗತ್ಯ ನಮಗಿಲ್ಲ. ಜಾತ್ಯಾತೀತ–ವಾದಮಂಡಿಸುವ ಈ ಕಾಲಘಟ್ಟದಲ್ಲಿ ಮುಂದಕ್ಕೆ ಇಂತಹ ಘಟನೆ ಮರುಕಳಿಸದಂತೆ ಎಚ್ಚರದಿಂದ ಇರೋಣ. ಒಬ್ಬ ವ್ಯಕ್ತಿಗೆ ಆದ ಅನ್ಯಾಯ ಇಡೀ ನಮ್ಮ ಸಮಾಜಕ್ಕೆ ಆಗುವಂತಹದು ಎಂದು ತಿಳಿದು ಬಾಳೋಣ.

ನಾವು ಸಮಾಜದಲ್ಲಿ ಹೇಗೆ ಬದುಕುತ್ತೇವೆ ಎಂಬುದು ಎಷ್ಟು ಮುಖ್ಯವೋ ನಮ್ಮ ಸ್ವಪ್ರತಿಷ್ಠೆ ಆತ್ಮಾಭಿಮಾನಕ್ಕೆ ಧಕ್ಕೆ ಆಗದಂತೆ ಬದುಕುವುದು ಕೂಡ ಅಷ್ಟೇ ಮುಖ್ಯ. ನಾವು ನಮ್ಮತನವನ್ನು ಬಿಡದೆ ಇದ್ದಾಗ ಸಮಾಜ ನಮ್ಮನ್ನು ಗುರುತಿಸಿ ಗೌರವಿಸುತ್ತದೆ. ಆದ್ದರಿಂದ "ಆಪತ್ತಿಗಾದವನೇ ನೆಂಟ" ಎಂಬ ಗಾದೆಯಂತೆ ಸಹಮತ ಸಹಬಾಳ್ವೆಯಿಂದ ಬದುಕೋಣ. ಇದು ನಮ್ಮೆಲ್ಲರ ಆಶಯ. ಮುಂದೆ ಇಂತಹಾ ಘಟನೆಗಳು ಸಂಭವಿಸಿದಲ್ಲಿ ಯಾವುದೇ ರಾಜಿ ಪಂಚಾಯತಿಗೆ ಮುಂದಾಗದೆ ಸಾಕ್ಷಿ ಸಮೇತ ಮಹಾಮಂಡಲಕ್ಕೆ ತಿಳಿಸಬೇಕಾಗಿ ವಿನಂತಿ.

**– ಎಮ್. ದೇವಾನಂದ ಭಟ್ ಬೆಳುವಾಯಿ,**
**ಕಾರ್ಯದರ್ಶಿ, ಸ್ಥಾನಿಕ ಬ್ರಾಹ್ಮಣ**
**ಮಹಾಮಂಡಲ (ರಿ), ಮಂಗಳೂರು**

## ದೀಪದಿ ದೀಪ ಹಚ್ಚೋಣ

**– ಕೆ. ಗೋಪಾಲರಾವ್ ಕಡಬ|**

ಬನ್ನಿರಿ, ಬನ್ನಿರಿ ಮಕ್ಕಳೆ ಎಲ್ಲ
ದೀಪದಿ ದೀಪವ ಹಚ್ಚೋಣ।
ದೀಪಾವಳಿಯ ಹಬ್ಬದ ದಿನದಿ
ಆಡುತ ಕೂಡಿ ನಲಿಯೋಣ ॥ ೧ ॥
ಎಣ್ಣೆಯ ಹಚ್ಚುತ, ಸ್ನಾನವ ಮಾಡುತ
ಹಿರಿಯರಿಗೆಲ್ಲಾ ನಮಿಸೋಣ।
ಹೊಸ ಹೊಸ ಉಡುಪು ಧರಿಸುತ ನಾವು
ದೇವಾಲಯಕೆ ಹೋಗೋಣ ॥ ೨ ॥

ಮಂದಿರದಲ್ಲಿ ದೀಪವನುರಿಸಿ
ಬಾಳಿಗೆ ಬೆಳಕನು ಬೇಡೋಣ।
ದೀಪಾವಳಿಯ ಶುಭ ದಿನದಂದು
ನಾಡಿಗೆ ಶುಭವನು ಹರಸೋಣ ॥ ೩ ॥
ದೀಪಾವಳಿಯು ಜೀವನ ಬೆಳಗಿಸಿ
ಬದುಕಲಿ ನೆಮ್ಮದಿ ಕರುಣಿಸಲಿ।
ಮಕ್ಕಳ ಮನದಿ ಜ್ಞಾನದ ಜ್ಯೋತಿ
ಸತತವೂ ಉರಿಯುತಲಿರಲಿ ॥ ೪ ॥

### ವಿರೋಧಾಭಾಸ

ಕೋಟಿ ಕೋಟಿ ಜನರು ದೇಶದ ತುಂಬೆಲ್ಲ...!
ಯಾವ ಊರಿನಲ್ಲೂ ಕೆಲಸಕ್ಕೆ ಜನರಿಲ್ಲ...!
ಎಲ್ಲಿ ಹೋದರು ಎಲ್ಲ?...!
ಮೇಲಿರುವ ಭಗವಂತನೇ ಬಲ್ಲ... !!!

### ವಿಪರ್ಯಾಸ

ಊರ ಮೈದಾನದಲ್ಲಿ ರಾಜಕಾರಣಿಗಳ
ವೈಭವದ ಸಾಧನಾ ಸಮಾವೇಶ...!
ಅವರಾರಿಗೂ ಕಾಣಲೇ ಇಲ್ಲ
ಮತದಾರನ ಒಡಲೊಳಗಿನ ಆಕ್ರೋಶ...!!


### ಜಿಜ್ಞಾಸೆ

ಸಾವು ಬೇರೆಯಲ್ಲ, ಬದುಕು ಬೇರೆಯಲ್ಲ...!
ಇವೆರಡನ್ನೂ ಬೇರೆ ಬೇರೆಯಾಗಿ ಗುರುತಿಸುವ
ಸರಿಯಲ್ಲ...!!
ಸಾವನ್ನು ಬದುಕಿನ ಕಣ್ಣಿನಿಂದ ನೋಡಬೇಕು...!!!
ಸಾವಿನ ಮನೆಯನ್ನು ಸಂಪೂರ್ಣ ಅರಿವಿನೊಂದಿಗೆ
ಚಲನಶೀಲತೆಯೊಂದಿಗೆ, ಆರೋಗ್ಯದಿಂದಲೇ
ಪ್ರವೇಶಿಸಬೇಕು...!!!

**–ಮಲ್ಲಿಕ್, ಉಳಿಯಾರು**

## ಶ್ರೀ ನಟರಾಜ್ ಪರ್ಕಳರಿಗೆ ಉಡುಪಿ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ

ಉಡುಪಿ ಜಿಲ್ಲಾ ಕನ್ನಡ ರಾಜ್ಯೋತ್ಸವ ಪ್ರಶಸ್ತಿಯನ್ನು ಉಡುಪಿ ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಪ್ರಮೋದ್ ಮಧ್ವರಾಜ್ ನವಂಬರ್ ಒಂದರಂದು ಉಡುಪಿ ಬೀಡಿನಗುಡ್ಡೆಯ ಬಯಲು ರಂಗಮಂದಿರದಲ್ಲಿ ನಡೆದ ಕರ್ನಾಟಕ ರಾಜ್ಯೋತ್ಸವದ ಸಮಾರಂಭದಲ್ಲಿ ಶ್ರೀ ನಟರಾಜ್ ಪರ್ಕಳರವರಿಗೆ ಕಲೆ (ಸಾಹಿತ್ಯ ಸಂಸ್ಕೃತಿ) ಕ್ಷೇತ್ರದಲ್ಲಿ ವಿಶಿಷ್ಟವಾದ ಸಾಧನೆ ಮಾಡಿರುವ ಬಗ್ಗೆ ಅಭಿನಂದಿಸಿ ಪ್ರದಾನ ಮಾಡಿದರು.

ಬಳಸಿದ ಕಾರುಗಳ ಮಾರಾಟ ಮತ್ತು ಖರೀದಿಗಾಗಿ ನಮ್ಮನ್ನು ಸಂಪರ್ಕಿಸಿ :
ಸೂಕ್ತ ಬೆಲೆಯೊಂದಿಗೆ ಉತ್ತಮ ಸೇವೆ ಲಭ್ಯ.

N. Laxmi Prasad
ಕಾರ್ಯಕಾರಿಣಿ ಮಂಡಳಿ ಸದಸ್ಯರು

D. K. District Used Vehicle Dealers & Agents Association (R.), Mangalore
Flat No. 103, Deepa Residency, Near Preethi Apartment
Kodiyalguttu West, Kodiyalbail, MANGALORE - 575 003
Mob. : 9845644489, 9964236997 E-mail : laxmiprasad5010@gmail.com


RAJESH POWER PRESS
PRINTERS & PUBLISHERS
DARBE, PUTTUR, DA. KA. - 574 202.
KARNATAKA STATE, SOUTH INDIA.
Ph : (08251) 231696, 231697 & 322386
E-mail : msraghunathrao@hotmail.com
QUALITY FIRST AND ALWAYS



ಪುತ್ತೂರಿನಲ್ಲಿ ವಾಸಿಸುತ್ತಿರುವ ಉಡುಪಿಯ ಕುಕ್ಕೆಹಳ್ಳಿ ದಿ| ಕೃಷ್ಣಮೂರ್ತಿರಾಯರ ಸೊಸೆ ಶ್ರೀಮತಿ ಸುಮನಾ ಪ್ರಶಾಂತ್ ಇವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ ಕಛೇರಿಯು ಪುತ್ತೂರಿನ ಮಹಾಲಿಂಗೇಶ್ವರ ದೇವಸ್ಥಾನದ ವಠಾರದ ನಟರಾಜ ವೇದಿಕೆಯಲ್ಲಿ ಇತ್ತೀಚೆಗೆ ನಡೆಯಿತು. ಇವರು ಬಂಗಾಡಿಯ ಶ್ರೀ ಬಾಲಕೃಷ್ಣ ರಾವ್ ಮತ್ತು ಶ್ರೀಮತಿ ಶಾಂಭವಿ ದಂಪತಿಗಳ ಸುಪುತ್ರಿಯಾಗಿರುತ್ತಾರೆ.



ದಶಂಬರ್ 3ರಂದು ಆಳ್ವಾಸ್ ನುಡಿಸಿರಿ ಡಾ| ಶಿವರಾಮ ಕಾರಂತ ವೇದಿಕೆಯಲ್ಲಿ ಉರ್ವ ನಾಟ್ಯಾಲಯದ ವಿದ್ಯಾರ್ಥಿಗಳಿಂದ ವಿದುಷಿ ಶ್ರೀಮತಿ ಕಮಲಾಭಟ್ ನಿರ್ದೇಶನದಲ್ಲಿ ಅವರ ಶಿಷ್ಯೆ ಶ್ರೀಮತಿ ವಿದುಷಿ ನಂದಳಿಕೆ ಸೌಜನ್ಯ ಅಜಯ್ ರಾವ್ ಸಿ.ಆರ್. ಅವರಿಂದ ಶ್ರೀ ರಾಮಾಯಣ ದರ್ಶನಂ ನೃತ್ಯ ವೈಭವ ಜರುಗಿತು.



26-11-2017ರಂದು ಪಡುಬಿದ್ರಿ ಬಾಲಗಣಪತಿ ಪ್ರಸನ್ನ ಪಾರ್ವತಿ ದೇವಸ್ಥಾನದಲ್ಲಿ ‘‘ಅಮ್ಮ ಜೋಕುಲ್ನ ಪೊರ್ಲುದೊ ಕೂಟ’’ವನ್ನು ತಾಯಂದಿರು ಹಾಗೂ ಮಕ್ಕಳು ದೀಪಬೆಳಗಿಸಿ ಉದ್ಘಾಟಿಸಿದ ಸಂದರ್ಭ.



ಭಾರತೀಯ ವೈದ್ಯಕೀಯ ಸಂಘದ ಉಡುಪಿ ಶಾಖೆಯ ಅಧ್ಯಕ್ಷರಾಗಿ ನಮ್ಮ ಪತ್ರಿಕೆಯ ಸಂಪಾದಕ ಹಾಗೂ ಉಡುಪಿಯ ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘದ ಉಪಾಧ್ಯಕ್ಷರಾದ ಡಾ| ವೈ. ಸುದರ್ಶನ ರಾವ್‌ರವರು ಆಯ್ಕೆಯಾಗಿದ್ದಾರೆ. ಅವರು ತಾ.12-11-2017ರಂದು ಉಡುಪಿಯ ಐ.ಎಂ.ಎ. ಭವನದಲ್ಲಿ ನಡೆದ ಪದಗ್ರಹಣ ಸಮಾರಂಭದಲ್ಲಿ ಅಧಿಕಾರ ಸ್ವೀಕರಿಸಿದರು.



ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಉಡುಪಿ ಇವರ ಪ್ರಾಯೋಜಕತ್ವದಲ್ಲಿ ಶ್ರೀ ಶಾರದಾಂಬಾ ಸಂಗೀತ ಕಲಾ ಸಂಘ, ಬ್ರಹ್ಮಾವರ ಇವರು ಬ್ರಹ್ಮಾವರದ ಸರಕಾರಿ ಪದವಿ ಪೂರ್ವ ಕಾಲೇಜಿನ ಸಭಾಂಗಣದಲ್ಲಿ ವೇಣುವಾದನ ಮತ್ತು ಭಕ್ತಿ ಸಿಂಚನ ಕಾರ್ಯಕ್ರಮ ನಡೆಸಿಕೊಟ್ಟರು. ಈ ಸಂದರ್ಭದಲ್ಲಿ ಶ್ರೀಮತಿ ಗಾಯತ್ರೀ ದಿನಮಣಿ ಶಾಸ್ತ್ರಿಯವರು ವೇಣುವಾದನ ಕಾರ್ಯಕ್ರಮ ನೀಡಿದರು.

## ಕರ್ನಾಟಕ ಬ್ಯಾಂಕಿಗೆ ಪ್ರಶಸ್ತಿ – ಬೊಕ್ಕಸ ಚಂದ್ರಶೇಖರರಾಯರ ಸಾಧನೆ




ಕರ್ನಾಟಕ ಬ್ಯಾಂಕಿನ ಜನರಲ್ ಮ್ಯಾನೇಜರ್ ಆಗಿರುವ ಮೂಡಬಿದರೆ ಆದಿಶಂಕರ ಸ್ಥಾನಿಕ ಬ್ರಾಹ್ಮಣ ಪರಿಷತ್ತಿನ ಅಧ್ಯಕ್ಷರಾದ ಶ್ರೀ ಬೊಕ್ಕಸ ಚಂದ್ರಶೇಖರ ರಾಯರು ಆರ್ಥಿಕ ಕ್ಷೇತ್ರದಲ್ಲಿ ನೂತನ ಆವಿಷ್ಕಾರಗಳಿಗಾಗಿ ಪ್ರಶಸ್ತಿಯನ್ನು ಕೇಂದ್ರ ಸರಕಾರದ ಅರ್ಥ ಇಲಾಖೆಯ ರಾಜ್ಯಮಂತ್ರಿಗಳಾದ ಶ್ರೀ ಶಿವಪ್ರಸಾದ್ ಶುಕ್ಲಾರವರಿಂದ ಸ್ವೀಕರಿಸಿದರು.

## ಡಾ| ವೈ. ರವೀಂದ್ರನಾಥ ರಾವ್ ರವರ ಪುಸ್ತಕ ಬಿಡುಗಡೆ



ಡಾ| ವೈ.ರವೀಂದ್ರನಾಥ ರಾವ್‌ರವರು ಕೊಂಕಣಿ ಖಾರ್ವಿ ಸಮಾಜದ ಸ್ಥಿತಿಗತಿಗಳ ಬಗ್ಗೆ ಅಧ್ಯಯನವನ್ನು ಮಾಡಿ ವರದಿಯನ್ನು ಸಿದ್ಧಪಡಿಸಿ ಸರ್ಕಾರಕ್ಕೆ ಸಲ್ಲಿಸಿರುವ ಪುಸ್ತಕವನ್ನು ಉಡುಪಿ ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಪ್ರಮೋದ್ ಮಧ್ವರಾಜ್‌ರವರು ಬಿಡುಗಡೆಗೊಳಿಸಿದರು. ಕೊಂಕಣಿ ಮಹಾಸಭಾದ ಅಧ್ಯಕ್ಷ ಶ್ರೀ ಟಿ.ವಿ.ಮೋಹನದಾಸ ಪೈ ಹಾಗೂ ಕೊಂಕಣಿ ಖಾರ್ವಿ ಮಹಾಸಭಾದ ಅಧ್ಯಕ್ಷ ಶ್ರೀ ಕೆ.ಬಿ.ಖಾರ್ವಿರವರು ಉಪಸ್ಥಿತರಿದ್ದರು. ಡಾ| ರವೀಂದ್ರನಾಥ ರಾವ್ ದಂಪತಿಗಳನ್ನು ಸನ್ಮಾನಿಸಲಾಯಿತು. ಈ ವರದಿಯ ಆಧಾರದಲ್ಲಿ ಖಾರ್ವಿ ಸಮಾಜಕ್ಕೆ ಸರಕಾರವು ವಿಶೇಷ ಸವಲತ್ತುಗಳನ್ನು ನೀಡುವ ಬಗ್ಗೆ ನಿರ್ಧರಿಸಲಿದೆ.


## ಶ್ರೀಮತಿ ಸಂಪದಾರವರಿಗೆ ಪ್ರಶಸ್ತಿ



ಶ್ರೀ ಎಲ್ಲೂರು ಶಾಂತಿನಾಥರಾವ್‌ರವರ ಪುತ್ರ ಅಮೇರಿಕಾದಲ್ಲಿ ನೆಲೆಸಿರುವ ಶ್ರೀ ವೈ.ದಿನೇಶ ರಾಯರ ಪತ್ನಿ ಶ್ರೀಮತಿ ಸಂಪದಾರವರು ತಮ್ಮ ವೃತ್ತಿಯಲ್ಲಿ ಸಂಶೋಧನೆಗೆ ಸಲ್ಲಿಸಿರುವ ಕೊಡುಗೆಯನ್ನು ಗಮನಿಸಿ ಸೈನೊಪ್ಸಿಸ್ ಸಂಸ್ಥೆಯಿಂದ ಪ್ರಶಸ್ತಿಗೆ ಭಾಜನರಾಗಿದ್ದಾರೆ.


## ಶ್ರೀ ಮಹಾವಿಷ್ಣುಮೂರ್ತಿ ದೇವಸ್ಥಾನ, ಕರ್ವಾಲು

**ಎರ್ಲಪಾಡಿ, ಕಾರ್ಕಳ ತಾಲೂಕು.**



**ಶ್ರೀ ಮಹಾಗಣಪತಿ ಹಾಗೂ ಶ್ರೀ ದುರ್ಗಾಪರಮೇಶ್ವರೀ ದೇವರ ಸಹಿತ ಕರ್ವಾಲು ಶ್ರೀ ಮಹಾವಿಷ್ಣುಮೂರ್ತಿ ದೇವಸ್ಥಾನದ**

### ವಾರ್ಷಿಕ ಗೌಣೋತ್ಸವವು

**ತಾ.22-01-2018 ರಿಂದ 25-01-2018ರ ಪರ್ಯಂತ ನಡೆಯಲಿದೆ.**

(2017 ನವೆಂಬರ್ ತಿಂಗಳ ಶ್ರೀ ಶಾರದಾ ಪತ್ರಿಕೆಯ “ದೇವಸ್ಥಾನಗಳ ಪರಿಚಯ” ಲೇಖನದಲ್ಲಿ ಮಾಹಿತಿ ಪೂರೈಕೆ ವ್ಯತ್ಯಯದಿಂದ ಜನವರಿ 23ರಿಂದ 26ರವರೆಗೆ ನಡೆಯಲಿದೆ ಎಂದು ವರದಿಯಾಗಿತ್ತು. ಈ ಬದಲಾವಣೆಯನ್ನು ದಯವಿಟ್ಟು ಗಮನಿಸಿ.)

**ಉತ್ಸವವು ತಾ.22-01-2018ರಂದು ಧ್ವಜಾರೋಹಣದೊಂದಿಗೆ ಆರಂಭವಾಗಿ ಆಗಮೋಕ್ತ ಪೂಜಾದಿಗಳು, ಉತ್ಸವಬಲಿ, ಭೂತಬಲಿ, ಗಣಹೋಮ, ಚಂಡಿಕಾ ಯಾಗ, ಆಶ್ಲೇಷಾಬಲಿ, ಸಾರ್ವಜನಿಕ ಅನ್ನಸಂತರ್ಪಣೆ ಸೇವೆಗಳು ನಡೆದು ತಾ.24-01-2018ರಂದು ಸಂಪ್ರೋಕ್ಷಣೆ, ಮುಂಡಿತ್ತಾಯಿ ದೈವದ ನೇಮ ಸಂಪನ್ನಗೊಳ್ಳಲಿದೆ.**

**ತಾ.25-01-2018ರಂದು ಆಶ್ಲೇಷಾಬಲಿ, ಮಹಾಮಂತ್ರಾಕ್ಷತೆಯೊಂದಿಗೆ ಉತ್ಸವ ಪೂರ್ಣಗೊಳ್ಳಲಿದೆ.**

ಸಮಾಜಬಾಂಧವ ಭಕ್ತಾಧಿಗಳಿಗೆ ಸುಸ್ವಾಗತ

ವಿ.ಸೂ. ನೀರೆಬೈಲೂರಿನಿಂದ ಕರ್ವಾಲು ದೇವಸ್ಥಾನಕ್ಕೆ 3 ಕಿ.ಮೀ ಮಾತ್ರ ದೂರವಿದೆ.

ಭಕ್ತಿಪೂರ್ವಕ ಪ್ರಣಾಮಗಳೊಂದಿಗೆ
**ಕೆ. ವೇಣುಗೋಪಾಲ ರಾವ್ ಮತ್ತು ಸಹೋದರರು ಹಾಗೂ ಬಂಧುಗಳು**, ಕರ್ವಾಲು ಮನೆ.

## ಶಾಲಿಪುರ ಶ್ರೀ ಸುಬ್ರಹ್ಮಣ್ಯ ದೇವಸ್ಥಾನ, ಕೊಕ್ರಾಡಿ : ಷಷ್ಠಿ ಮಹೋತ್ಸವ





ಕೊಕ್ರಾಡಿ ಶಾಲಿಪುರ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ 22.11.2017ರಿಂದ 24.11.2017ರವರೆಗೆ ಷಷ್ಠಿ ಮಹೋತ್ಸವವು ಶ್ರದ್ಧಾಭಕ್ತಿಯಿಂದ ಭಕ್ತ ಜನರ ಸಹಕಾರದೊಂದಿಗೆ ಸಂಭ್ರಮದಿಂದ ನಡೆಯಿತು.

ಮಾರ್ಗಶಿರ ಶುದ್ಧ ಚತುರ್ಥಿಯಂದು 12 ತೆಂಗಿನ ಕಾಯಿಯ ಗಣಹೋಮ, ಗಣಪತಿ ದೇವರಿಗೆ ಪಂಚಾಮೃತ ಅಭಿಷೇಕ, ಅಪೂಪ ಸೇವೆ, ಮಧ್ಯಾಹ್ನ ಮಹಾಪೂಜೆ, ಅನ್ನಸಂತರ್ಪಣೆ, ಸಾಯಂಕಾಲ ರಂಗಪೂಜೆ ನಡೆಯಿತು. ಪಂಚಮಿಯಂದು ಶ್ರೀ ದೇವರಿಗೆ ಪಂಚಾಮೃತ ಅಭಿಷೇಕ, ಪವಮಾನ ರುದ್ರಾಭಿಷೇಕ, 25 ಕಲಶ ಪ್ರತಿಷ್ಠೆ, ಅಧಿವಾಸ ಹೋಮ, ಕಲಶಾಭಿಷೇಕ, ಅನ್ನಸಂತರ್ಪಣೆ ಸಾಯಂಕಾಲ ಹೂವಿನ ಪೂಜೆ, ರಂಗಪೂಜೆ ನಡೆಯಿತು. ಷಷ್ಠಿಯಂದು ಪ್ರಾತಃ ಪಂಚಾಮೃತ ಅಭಿಷೇಕ, ಸಿಯಾಳ ಅಭಿಷೇಕ, ಶ್ರೀ ರುದ್ರಾಭಿಷೇಕ, ಸಹಸ್ರಪುಷ್ಪಾರ್ಚನೆ ಮಹಾಪೂಜೆ, ಉತ್ಸವ ಬಲಿ, ಪಲ್ಲ ಪೂಜೆ, ದರ್ಶನ ಬಲಿ, ಬಟ್ಟಲು ಕಾಣಿಕೆ, ಅನ್ನ ಸಂತರ್ಪಣೆ ನಡೆಯಿತು. ಸಾಯಂಕಾಲ ಭಜನಾ ಕಾರ್ಯಕ್ರಮ, ಹೂವಿನ ಪೂಜೆ, ಗಣಪತಿ ದೇವರಿಗೆ ರಂಗಪೂಜೆ, ಸುಬ್ರಹ್ಮಣ್ಯ ದೇವರಿಗೆ ಮಹಾರಂಗ ಪೂಜೆ, ಉತ್ಸವ ಬಲಿ, ವಸಂತಕಟ್ಟೆಯಲ್ಲಿ ಪೂಜೆ, ಮಂತ್ರಾಕ್ಷತೆಯೊಂದಿಗೆ ಸಂಪನ್ನಗೊಂಡಿತು. ಮಹಾ ಅನ್ನಸಂತರ್ಪಣೆಯಲ್ಲಿ ಐದು ಸಾವಿರಕ್ಕಿಂತಲೂ ಮಿಕ್ಕಿ ಭಕ್ತಾಧಿಗಳು ಅನ್ನಪ್ರಸಾದ ಸ್ವೀಕರಿಸಿದರು.

ಕ್ಷೇತ್ರದ ತಂತ್ರಿಗಳಾದ ವೇ.ಬ್ರ.ಶ್ರೀ ವಾಗೀಶ ಶಾಸ್ತ್ರಿಯವರ ಮಾರ್ಗದರ್ಶನದಲ್ಲಿ ಎಲ್ಲಾ ಕಾರ್ಯಕ್ರಮಗಳು ನಡೆದವು. ಪ್ರಧಾನ ಅರ್ಚಕರು, ಕ್ಷೇತ್ರದ ಆಡಳಿತ ಮಂಡಳಿಯ ಸದಸ್ಯರು ಉಪಸ್ಥಿತರಿದ್ದು ಜಾತ್ರೋತ್ಸವ ಯಶಸ್ವಿಯಾಗಿ ಸಂಪನ್ನಗೊಂಡಿತು.

## ಹಿರಿಯ ನಾಗರಿಕರಿಗಾಗಿ ನೃತ್ಯ ವೈವಿಧ್ಯ



ತಾ.24.11.2017ರಂದು 83 ವರುಷಗಳ ಇತಿಹಾಸವಿರುವ ಕದ್ರಿ ನೃತ್ಯ ವಿದ್ಯಾನಿಲಯ, ಚಾರಿಟೇಬಲ್ ಟ್ರಸ್ಟ್‌ನ ನಿರ್ದೇಶಕರಾಗಿರುವ ನಾಟ್ಯ ವಿಶಾರದ, ಗುರುಕುಲ ಭೂಷಣ, ವಿದ್ವಾನ್ ಶ್ರೀ ಯು.ಕೆ. ಪ್ರವೀಣ್‌ರವರು ತಮ್ಮ ಪೂಜ್ಯ ಪಿತಾಮಹರೂ, ಸಂಸ್ಥೆಯ ಸಂಸ್ಥಾಪಕರೂ ಆದ ಕೀರ್ತಿಶೇಷ ಶ್ರೀ ಯು.ಎಸ್.ಕೃಷ್ಣರಾಯರ 103ನೇ ಜನ್ಮದಿನೋತ್ಸವವನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮಂಗಳೂರು ಇವರ ಪ್ರಾಯೋಜಕತ್ವದಲ್ಲಿ ಮಂಗಳೂರಿನ ಅಸೈಗೋಳಿಯಲ್ಲಿರುವ ಅಭಯ ಆಶ್ರಮದ ಹಿರಿಯ ನಾಗರಿಕರಿಗೆ ನೃತ್ಯ ಕಾರ್ಯಕ್ರಮವನ್ನು ನೀಡುವ ಮೂಲಕ ಆಚರಿಸಿದರು. ಈ ಕಾರ್ಯಕ್ರಮಕ್ಕೆ ಮಂಗಳೂರಿನ ಸುಪರಿಂಟೆಂಡೆಂಟ್ ಆಫ್ ಪೋಲೀಸ್ ಆಗಿರುವ ಡಾ| ಸಿ.ಬಿ.ವೇದಮೂರ್ತಿ ಐಪಿಎಸ್ ಇವರು ಅಧ್ಯಕ್ಷರಾಗಿಯೂ, ಮಂಗಳೂರಿನ ಯೆನೋಪೋಯಾ ಮೆಡಿಕಲ್ ಕಾಲೇಜಿನ ಇ.ಎನ್.ಟಿ ವಿಭಾಗದ ಅಸಿಸ್ಟೆಂಟ್ ಪ್ರೊಫೆಸರ್ ಆಗಿರುವ ಡಾ| ವಿಜಯಲಕ್ಷ್ಮೀ ಸುಬ್ರಹ್ಮಣ್ಯ ಇವರು ಅತಿಥಿಗಳಾಗಿಯೂ ಆಗಮಿಸಿದ್ದರು. ನೃತ್ಯ ವಿದ್ಯಾನಿಲಯದ ಸುಮಾರು 30 ಪುಟಾಣಿ ಕಲಾವಿದರು ತಮ್ಮ ನೃತ್ಯ ವೈವಿಧ್ಯಗಳಿಂದ ಹಿರಿಯ ನಾಗರಿಕರ ಮನ ರಂಜಿಸಿದರು. ಈ ಕಾರ್ಯಕ್ರಮದಲ್ಲಿ ಅಭಯ ಆಶ್ರಮದ ಅಧ್ಯಕ್ಷರಾದ ಶ್ರೀ ಶ್ರೀನಾಥ್ ಹೆಗ್ಡೆ ಹಾಗೂ ನೃತ್ಯ ವಿದ್ಯಾನಿಲಯದ ಗುರುಗಳಾದ ವಿದ್ವಾನ್ ಶ್ರೀ ಯು.ಕೆ.ಪ್ರವೀಣ್ ಹಾಗೂ ಉಷಾ ಪ್ರವೀಣ್ ದಂಪತಿಗಳು ಉಪಸ್ಥಿತರಿದ್ದರು.


With Best Compliments from :



**Dr. Sanath S. Rao**
M.B.B.S., M.D.(Derm, Vene, Lep)
Fellow Cosmetology (St. John's Hospital)
SKIN SPECIALIST & COSMETOLOGIST

Clinic : 0820-6529474
Mobile : 9886093199
drsanathrao@gmail.com

**JALAJA SKIN CARE AND COSMETOLOGY CLINIC**
Medicare Centre, Behind Pai Electronics, Court Back Road, Udupi - 576 101.
Visit us at : www.jalajaskincare.com
Timings : 9-30 a.m. to 2-00 p.m., 4-30 p.m. to 8-00 p.m.
Also available at Lalith Hospital (11-30 a.m. to 2-00 p.m.)



**ಶ್ರೀ ಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ನಿ.)**
ಎಲ್.ನಂ.31017, ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ - 576 101. ಫೋನ್ : 2522408

ನಿಮ್ಮ ಕನಸಿನ ಮನೆ ಸಾಕಾರಗೊಳಿಸಿ
"ಗೃಹ ಸಾಲ"
ಸಂಘದ ಪ್ರಾಥಮಿಕ ಸದಸ್ಯರಿಗೆ 11.50%
(ಷರತ್ತುಗಳು ಅನ್ವಯ)

| | | |
|---|---|---|
| ವಾಹನ ಸಾಲ | : | 12% |
| ಹಳೆಯ ವಾಹನ | : | 13.5% |
| ಆಭರಣ ಸಾಲ | : | 12% |
| ವೈಯಕ್ತಿಕ ಸಾಲ | : | 16% |
| ಶಿಕ್ಷಣ ಸಾಲ | : | 12% |
| ಅಡಮಾನ ಸಾಲ | : | 12.5% |

ಠೇವಣಿಗಳ ಬಡ್ಡಿದರ

| | | | |
|---|---|---|---|
| ಉಳಿತಾಯ ಖಾತೆ | : 5% | ನಿತ್ಯನಿಧಿ ಠೇವಣಿ | : 5% |
| 46 ದಿನಗಳಿಂದ 364 ದಿನಗಳು | : 6%, | 1 ವರ್ಷ ಮತ್ತು ಹೆಚ್ಚಿನ ಅವಧಿಗೆ | : 9% |

(ಹಿರಿಯ ನಾಗರಿಕರಿಗೆ/ಸಂಘ ಸಂಸ್ಥೆಗಳಿಗೆ 1 ವರ್ಷಕ್ಕಿಂತ ಹೆಚ್ಚಿನ ಅವಧಿಯ ಠೇವಣಿಗಳಿಗೆ 0.5% ಹೆಚ್ಚಿಗೆ ನೀಡಲಾಗುವುದು)

2010-11 ರಿಂದ 2015-16ನೇ ವರ್ಷದ ವರೆಗಿನ ಲಾಭಾಂಶವನ್ನು ಪಡೆದುಕೊಳ್ಳದಿರುವ ಸದಸ್ಯರು ಸಂಘದ ವ್ಯವಹಾರದ ಸಮಯದಲ್ಲಿ ಬಂದು ಪಡೆದುಕೊಳ್ಳಬಹುದು. ಅಥವಾ ತಮ್ಮ ಹೆಸರಿನಲ್ಲಿ ಉಳಿತಾಯ ಖಾತೆಯನ್ನು ತೆರೆದಲ್ಲಿ ಪ್ರತಿ ವರ್ಷದ ಲಾಭಾಂಶವನ್ನು ಉಳಿತಾಯ ಖಾತೆಗೆ ಜಮೆ ಮಾಡಲಾಗುವುದು.

ನಿಮ್ಮ ಹತ್ತಿರದ ಶಾಖೆಯನ್ನು ಇಂದೇ ಸಂಪರ್ಕಿಸಿರಿ
ಪ್ರಧಾನ ಕಛೇರಿ (☎ 2522408) ಕುಕ್ಕಿಕಟ್ಟೆ ಶಾಖೆ (☎ 2592133) ಪಡುಬಿದ್ರಿ ಶಾಖೆ (☎ 2556608) ಕೋಟೇಶ್ವರ ಶಾಖೆ (☎ 9341854114)



With Best Compliments From :




9845084866, 9880742159, 9886199769
1st Floor, New Milagres Mansion, Falnir Road, Mangalore - 575001
info@landtrades.in
sales@landtrades.in
Ph: 0824 2425424
www.landtrades.in
CRISIL DA3+ CREDAI


Owned & Published by : Sri Sthanika Dravida Brahmana Sangha (R.), Shri Sharada Mantapa, Sharada Nagara, Kunjibettu, Udupi - 576 102. Ph : 0820-2520754
Edited by Dr.Y. Sudharshan Rao Udupi, Designed & Printed @ SriNidhi Computer Graphics, Rajataadri, Manipal. E-mail : srisharadaudupi@gmail.com Website : www.srisharada.org